# ಅಪರಂಜಿ



ತಿಳಿನಗೆಯ ಕಾರಂಜಿ



ಸಂಪುಟ 28
ಸಂಚಿಕೆ - 6
ಮಾರ್ಚ್ - 2011

**ಸಂಪಾದಕ ಮಂಡಳಿ**
ಶ್ರೀ ಎಂ. ಶಿವಕುಮಾರ್
ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ
ಉಪ ಸಂಪಾದಕರು
ಶ್ರೀ ಬಾಗೂರು ಚಂದ್ರು
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಟ್ರಸ್ಟಿಗಳು**
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ

**ವಿಶೇಷ ಆಹ್ವಾನಿತರು**
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

**ಗೌರವ ಸಲಹೆಗಾರರು**
ಶ್ರೀ ಅ.ರಾ.ಸೇ.

**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರ ಜೋಡಣೆ:
ಒಮೇಗಾ ಲೇಸರ್‌ಟೆಕ್

## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಅಸೋಸಿಯೇಷನ್... | ಅ.ರಾ.ಸೇ. | 6 |
| ಕ್ರಿಕೆಟ್ಟಾಟದ ಸಂಕಟ | ಭುವನೇಶ್ವರಿ ಹೆಗಡೆ | 9 |
| ಶಾಂತಿಗಾಗಿ ಕ್ರಿಕೆಟ್ | ಬಾಗೂರು ಚಂದ್ರು | 11 |
| ಕ್ರಿಕೆಟ್ಕ್ವಿಜ್ | ಗೋಪಾಲಾನಂದ | 14 |
| ಕ್ರಿಕೆಟ್‌ನ ಅಂದ.... | ಇ.ಆರ್. ರಾಮಚಂದ್ರನ್ | 15 |
| ಬಾಳು ಬಾಲಾಯಿತು | ವಿನಾಯಕ | 19 |
| ಕ್ರಿಕೆಟ್ ವಕ್ರಬಂಧ | ಎನ್. ರಾಮನಾಥ್ | 22 |
| ಗತವೈಭವ | ಶಿವು | 23 |
| ಒಂದು ದಿನದ ಪಂದ್ಯ | ಪ್ರಕಾಶ್ | 26 |
| ಮೂರನೆ ಟೆಸ್ಟ್ | ಆನಂದ | 28 |
| ಕ್ರಿಕೆಟ್‌ಗವನಗಳು | ಎನ್. ನಾಗ್ | 30 |
| ಕಮಲಾನಗರದ... | ಗಣೇಶ್ ಹೆಗ್ಗಡೆ | 31 |
| ಸಿಂಡೀ ಮಾಡಿದ್... | ವಾಣೀ ಸುರೇಶ್ | 34 |
| ಅದೇನು ಮಾಯಾ.. | ನಾಗೇಶ ಹೆಗಡೆ | 38 |


ಮುಖಪುಟ ವ್ಯಂಗ್ಯ ಚಿತ್ರ -
ಸೌಜನ್ಯ : ಪೊನ್ನಪ್ಪ, ಟೈಂಸ್ ಆಫ್ ಇಂಡಿಯಾ

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: brmurthy@dataone.in

# ಅಪರಂಜಿ ಕಿಡಿ

● ಪ್ರಕಾಶ್



ಕೇಂದ್ರದಿಂದ ರಾಜ್ಯ ಕಬಳಿಕೆ – ಸುದ್ದಿ

**● ಇದೇನು ಆಶ್ವಾಸನೆಯೋ, ಬೆದರಿಕೆಯೋ ??**

★★★

ವಿಶ್ವಸಂಸ್ಥೆಯಲ್ಲಿ ವಿದೇಶಾಂಗ ಸಚಿವರು ನಗೆಪಾಟಲು – ಸುದ್ದಿ

**● .....ನೀ ಬೇಗನೆ (ಹಿಂತಿರುಗಿ) ಬಾರೋ !!**

★★★

ವರ್ತುಲ ರೈಲು : ಕೇಂದ್ರಕ್ಕೆ ನಿಯೋಗ – ಪತ್ರಿಕೆ

**● wheels within wheels ಅಂತ ಅಪರಂಜಿ ನಕ್ಕಳಂತೆ !!**

★★★

ಪ್ರಜಾಪ್ರಭುತ್ವ ಕುಸಿದು ಬೀಳುವ ಅಪಾಯ – ಮಾನ್ಯ ರಾಜ್ಯಪಾಲರು

**● ಯಥಾ ರಾಜಾ, ತಥಾ ಪ್ರಜಾಃ !!**

★★★

'ಕಾಂಗ್ರೆಸ್ ಜನ್ಮ ಜಾಲಾಡುವೆ' – ಬಿಎಸ್‌ವೈ ಹೇಳಿಕೆ

**● ಜಗನ್ನಿಯಾಮಕನೇ ನಸು ನಕ್ಕನಂತೆ !!**

★★★

ಅರಮನೆ ಮೈದಾನದಲ್ಲಿ ಮತ್ಸ್ಯ ಮೇಳ – ದಿನಪತ್ರಿಕೆ

**● ಸುತ್ತಲೂ ಸುಗಂಧರಾಜ ಬೆಳೆಸುತ್ತಾರಂತೆ !!**

★★★

ರಾಜ್ಯದಲ್ಲಿ ಭ್ರಷ್ಟಾಚಾರ ಎಷ್ಟು ಅಧೋಗತಿಗಿಳಿದಿದೆಯೆಂದರೆ.....

**● ಅದು ಇನ್ನೂ ಕೆಳಗಿಳಿಯಲಾರದು ಎಂಬುದೇ ಸುಸುದ್ದಿ !!**

★★★

## ನಮ್ಮ ನಿಮ್ಮಲ್ಲಿ

ನನಗೆ ಆಗ ಆರೇಳು ವಯಸ್ಸು. ದೆಹಲಿಯಿಂದ ನಮ್ಮ ಸೋದರತ್ತೆ ಅವರ ಮಕ್ಕಳೊಡನೆ ಬೇಸಿಗೆಯ ರಜಕ್ಕಾಗಿ ಬೆಂಗಳೂರಿಗೆ ಬಂದು ನಮ್ಮ ಮನೆಯಲ್ಲೇ ಇಳಿದುಕೊಂಡಿದ್ದರು. ಮನೆಯ ಮಕ್ಕಳಾದ ನಮಗೆಲ್ಲಾ ನೆಂಟರು ಬಂದರೆಂದರೆ ಸಹಜವಾಗಿಯೇ ಖುಷಿ. ನಾನೂ ನನ್ನ ತಮ್ಮ ಪ್ರಕಾಶನೂ ದೆಹಲಿ ಅತಿಥಿಗಳಾದ ರಾಜ ಮತ್ತು ರಾಮ ಇವರುಗಳೊಂದಿಗೆ ಬೆಳಗಿನಿಂದ ಸಂಜೆಯವರೆಗೆ ಆಟ ಆಡಿದ್ದೂ ಆಡಿದ್ದೇ. ಗೋಲಿ, ಬುಗುರಿ, ಚಿಣ್ಣಿ ದಾಂಡು ಇವೇ ನಮ್ಮ ಬತ್ತಳಿಕೆಯಲ್ಲಿದ್ದ ಆಟಗಳು. ಒಂದು ಬೆಳಿಗ್ಗೆ ರಾಜ ''ಇವತ್ತು ಕ್ರಿಕೆಟ್ ಆಡೋಣ'' ಅಂತ ತನ್ನ ಅಭಿಪ್ರಾಯವನ್ನು ಮಂಡಿಸಿದ, ರಾಮ. 'ಹೌದು, ಹೌದು, ಚೆನ್ನಾಗಿರುತ್ತೆ'' ಅಂತ ಅಗ್ರಜನ ಸಲಹೆಯನ್ನು ಉತ್ಸಾಹದಿಂದ ಅನುಮೋದಿಸಿದ. ನನಗಾಗಲೀ ನನ್ನ ತಮ್ಮನಿಗಾಗಲೀ ಈ ಹೊಸ ಆಟದ ವಿವರಗಳು ಸುತರಾಂ ತಿಳಿಯದು. ''ಹೇಗೆ ಆಡೋದು ಈ ಆಟಾನ?'' ಅಂತ ಕೇಳಿದೆ.

''ಅದೇನು ಸುಲಭ, ಹೇಗೂ ಟೆನ್ನಿಸ್ ಬಾಲ್ ಇದ್ದೇ ಇದೆ. ಷೆಡ್ಡಿನಲ್ಲಿರುವ ಮರದ ಹಲಗೆಯನ್ನು ಬಳಸಿ ಬ್ಯಾಟ್ ತಯಾರಿಸಬಹುದು.'' ಅಂತ ಹೇಳಿ ನೇರವಾಗಿ ಕಾಂಪೌಂಡಿನ ಬಳಿ ಹೋಗಿ ಗೋಡೆಯ ಮೇಲೆ ಇಜ್ಜಲು ತುಂಡಿನಿಂದ ಮೂರು ಗೆರೆಗಳನ್ನ ಮೂಡಿಸಿ ''ಇದೇ ವಿಕೆಟ್'' ಅಂತ ಹೇಳಿ ಅಲ್ಲಿಂದ ಬಹು ಜಾಗರೂಕತೆಯಿಂದ ಇಪ್ಪತ್ತು ಹೆಜ್ಜೆಗಳನ್ನು ನಡೆದು, ಕೈಲಿದ್ದ ಬಿದಿರು ಕಡ್ಡಿಯಿಂದ ನೆಲದ ಮೇಲೆ ಒಂದು ಗೆರೆ ಎಳೆದು ''ಇದೇ ಬೌಲಿಂಗ್ ಕ್ರೀಸ್'' ಅಂತ ಅಧಿಕಾರವಾಣಿಯಿಂದ ನುಡಿದ. ''ಆಟದ ರೂಲ್ಸ್ ಏನು?'' ಅಂತ ಪ್ರಕಾಶ್ ಕೇಳಿದ. ''ಅದೆಲ್ಲಾ ಆಟ ಆಡ್ತಾ ಆಡ್ತಾ ಗೊತ್ತಾಗುತ್ತೆ. ಈಗ ಮೊದಲು ಬ್ಯಾಟ್ ರೆಡಿ ಮಾಡೋದು ಮುಖ್ಯ. ಪಕ್ಕದ ಮನೇಲಿ ಮರಗೆಲಸ ಮಾಡ್ತಾ ಇರೋ ಮುನಿಸ್ವಾಮಿ ಹತ್ರ ಹೋಗಿ ಈ ಹಲಗೇಗೆ ಒಂದು ಹ್ಯಾಂಡಲ್ ಕತ್ತರಿಸಿಕೊಂಡು ಬರಬೇಕು. ನೀನೂ ಬಾ ನನ್ನೊಜ್ತೆ'' ಅಂತ ಹೇಳಿ ರಾಜ ನನ್ನ ತಮ್ಮನನ್ನು ಕರೆದುಕೊಂಡು ಬ್ಯಾಟ್ ರೆಡಿ ಮಾಡಲು ಹೊರಟ. ಬ್ಯಾಟ್ ತಯಾರಾದಮೇಲೆ ಆಟ ಶುರು. ರಾಜ ಬ್ಯಾಟಿಂಗ್, ರಾಮ ಬೋಲಿಂಗ್. ಒಂದೆರಡು ಓವರ್ ಆದಮೇಲೆ ರಾಮ ಬ್ಯಾಟ್ ಹಿಡಿದ ನನಗೆ ಬೋಲಿಂಗ್ ಅವಕಾಶ ಸಿಕ್ಕಿತು. ಆ ದಿನವೆಲ್ಲಾ ನಾನೇ ಬೋಲ್ ಮಾಡಬೇಕಾಯಿತು. ಪ್ರಕಾಶ ಪರ್ಮನೆಂಟ್ ಫೀಲ್ಡರ್. ನಮ್ಮ ದೆಹಲಿ ಅತಿಥಿಗಳಿಬ್ಬರೂ ಬ್ಯಾಟಿಂಗ್ ಗುತ್ತಿಗೆ ಪಡೆದಿದ್ದರು. ಔಟ್ ಆಗೋ ರೂಲ್ಸ್ ನಮಗೆ ತಿಳಿಸಿರಲಿಲ್ಲ ಆ ಖದೀಮರು. ಹಾಗಾಗಿ ಅವರುಗಳು ಆಡಿದ್ದೇ ಆಟ. ಅಂತೂ ನಮ್ಮಂಥ ಗುಗ್ಗುಗಳಿಗೂ ಅಂದು ಕ್ರಿಕೆಟ್ ಆಟದ ಪರಿಚಯ ಆಯಿತು.

ನಾನು ಎಲ್.ಎಸ್.ಗೆ ಬರುವ ಹೊತ್ತಿಗೆ, ನನ್ನ ಗೆಳೆಯರ ವಲಯದಲ್ಲಿ, ಮುಖ್ಯವಾಗಿ ಮಲ್ಲಿಕಾರ್ಜುನ ಎಂಬ ಎಕ್ಸ್‌ಪರ್ಟ್‌ನ ಸಹಾಯದಿಂದ ಇಂಡಿಯನ್ ಕ್ರಿಕೆಟಿಗರ ಪರಿಚಯವಾಗತೊಡಗಿತು. ಹೇಮೂ ಅಧಿಕಾರಿ, ಮಾಧವ್ ಮಂತ್ರಿ, ದತ್ತೂ ಫಡ್ಕರ್, ಪಾಲಿ ಉಮ್ರಿಗರ್ (ಮಲ್ಲಿಕಾರ್ಜುನ ಇವನನ್ನು ಉಮ್ಲಿಗರ್ ಅಂತಲೇ ಕರೆಯುತ್ತಿದ್ದ), ವಿಜಯ್ ಹಜಾರೆ, ವಿನೂ ಮಂಕಡ್ ಇಂತಹ ಅತಿ ವಿಚಿತ್ರವಾದ ಹೆಸರುಗಳು ನಮ್ಮ ನಾಲಿಗೆಗಳ ಮೇಲೆ ನರ್ತಿಸತೊಡಗಿದವು. ನಮ್ಮ ಸ್ಕೂಲಿನ ಪಕ್ಕದಲ್ಲಿದ್ದ ಕಾಫಿ ಹೋಟೆಲ್ಲಿನ ರೇಡಿಯೋದಿಂದ ಹೊರಹೊಮ್ಮುತ್ತಿದ್ದ ಕಾಮೆಂಟ್ರಿಯನ್ನು ಕೇಳಲು ಫುಟ್‌ಪಾತಿನ ಮೇಲೆ ಜನ ಕಿಕ್ಕಿರಿದಿರುತ್ತಿದ್ದರು. ನಾನೂ ಅಲ್ಲಿ ಹೋಗಿ ಅವರುಗಳ ಕಾಲಬದಿಯಲ್ಲಿ ನಿಂತು ರೇಡಿಯೋದಿಂದ ''ಹೋ'' ಎಂಬ ಸದ್ದು ಹೊರಹೊಮ್ಮಿದಾಗ, ಪಕ್ಕದಲ್ಲಿದ್ದ ಸೈಂಧವನ ಕಾಲುಗಳನ್ನುದ್ದೇಶಿಸಿ ''ಸ್ಕೋರ್ ಎಷ್ಟ್ರೀ?'' ಎಂದು ಕೇಳಿ, ಆ ಮಹಾನುಭಾವನಿಂದ ''ಥತ್, ಔಟಾದ ನನ್ಮಗ'' ಎಂಬ ಉದ್ಗಾರ ಸ್ವೀಕರಿಸಿ ಸ್ಕೂಲಿಗೆ ಹಿಂತಿರುಗುತ್ತಿದ್ದೆವು. ಈ ಬಗೆಯಾದ ಫುಟ್‌ಪಾತ್ ರೇಡಿಯೋ ಕೇಳುವಿಕೆ ಹೈಸ್ಕೂಲ್, ಕಾಲೇಜುಗಳಲ್ಲೂ ಮುಂದುವರಿಯಿತು.

ಕಾಲೇಜು ದಾಟಿದ ಮೇಲೆ ಅದೇಕೋ ಕ್ರಿಕೆಟ್‌ನ ಮೇಲಿನ ಆಸಕ್ತಿ ಮೊದಲಿನಷ್ಟು ಇರಲಿಲ್ಲ. ಆದರೆ ಮನೆಯಲ್ಲಿನ ರೇಡಿಯೋದಲ್ಲಿ "ವಿಜಿ" (ರಾಜಕುಮಾರ್ ಆಫ್ ವಿಜಯನಗರಮ್), ಚಕ್ರಪಾಣಿ, ಇವರುಗಳು ಹೇಳುತ್ತಿದ್ದ ಕಾಮೆಂಟ್ರಿಯನ್ನು ನಮ್ಮಪ್ಪ ಮತ್ತು ಅವರ ಗೆಳೆಯ ಶ್ರೀರಂಗ ಇವರುಗಳು ಬಹು ಭಕ್ತಿಯಿಂದ ಕೇಳುತ್ತಿದ್ದುದನ್ನು ನೋಡಿದ್ದೆ. ಮ್ಯಾಚು ಮುಗಿದ ಮೇಲೆ ಆಟ ಹೇಗಿರಬೇಕಾಗಿತ್ತು ಎಂಬುದರ ಬಗ್ಗೆ ಅವರಿಬ್ಬರ ನಡುವೆ ನಡೆಯುತ್ತಿದ್ದ ವಾಗ್ವಾದ ಕೇಳಲು ಬಹು ಸ್ವಾರಸ್ಯಕರವಾಗಿರುತ್ತಿತ್ತು. ಕಾನ್ಪುರದಲ್ಲೊಮ್ಮೆ ಆಸ್ಟ್ರೇಲಿಯಾ ವಿರುದ್ಧ ಭಾರತ ಟೆಸ್ಟ್ ಮ್ಯಾಚ್ ಆಡಿ ಜಸು ಪಟೇಲ್ ಎಂಬಾತ ಅನೇಕ ವಿಕೆಟ್ಟುಗಳನ್ನು ತೆಗೆದಾಗ ನಮ್ಮಪ್ಪ ಆತನ ಸಾಹಸವನ್ನು ಕೊಂಡಾಡದೇ ಇದ್ದಾಗ ಶ್ರೀರಂಗರು ಮುನಿಸಿಕೊಂಡದ್ದು ಇಂದಿಗೂ ನೆನಪಿನಲ್ಲಿ ಹಸಿರಾಗಿದೆ.

ಎಂಭತ್ತರ ದಶಕದ ಹೊತ್ತಿಗೆ ನಮ್ಮ ಮನೆಯಲ್ಲೂ ಟಿ.ವಿ. ಪ್ರತಿಷ್ಠಾಪನೆ ಆಯಿತು. ಆ ಮೊದಲ ದಿನಗಳಲ್ಲಿ ಇಂದಿನಷ್ಟು ಜಾಹಿರಾತುಗಳ ಹಾವಳಿ ಇರಲಿಲ್ಲ, ಅರ್ಧ ಗಂಟೆಗೊಮ್ಮೆ ಸ್ಕೋರು ತಿಳಿದುಕೊಂಡು ಓಡಾಡಿಕೊಂಡು ಇರಬಹುದಾಗಿತ್ತು. ಇಂದಿನ ಐಪಿಎಲ್‌ಗಳ ತರಹ ಪೆದ್ದು ಪೆಟ್ಟಿಗೆಯ ಮುಂದೆ ಅಂಟಿಕೊಂಡು ಇರಬೇಕಾದ ಅಗತ್ಯ ಖಂಡಿತ ಇರಲಿಲ್ಲ. ಕಳೆದ ಮೂರು ವರ್ಷಗಳಿಂದ ನಾನು ಐಪಿಎಲ್ ಎಂಬ ಮೂರ್ಖ ಹವ್ಯಾಸಕ್ಕೆ ಬಲಿಯಾಗಿದ್ದೇನೆ ಎಂದು ನಿಜ ಒಪ್ಪಿಕೊಂಡು ಬಿಡುತ್ತೇನೆ. ವರ್ಲ್ಡ್ ಕಪ್ ಮ್ಯಾಚುಗಳಲ್ಲಿ ಇಂಡಿಯಾ ಭಾಗವಹಿಸುವ ಮ್ಯಾಚುಗಳತ್ತ ನನ್ನ ಒಲವು. ಓವರಿನ ಐದನೆಯ ಬಾಲು ಮುಗಿಯಲಿಕ್ಕಿಲ್ಲ, ಜಾಹಿರಾತುಗಳನ್ನು ನುಗ್ಗಿಸುವ ಈ ಟಿ.ವಿ. ಛಾನೆಲ್ಲುಗಳ ದಾರ್ಷ್ಟ್ಯವನ್ನು ತೀವ್ರವಾಗಿ ಖಂಡಿಸುವೆ. ಐಪಿಎಲ್ ಹರಾಜುಗಳಲ್ಲಿ ಕೋಟಿಗಟ್ಟಲೆ ಡಾಲರುಗಳನ್ನು ಸಂಪಾದಿಸುವ ಕ್ರಿಕೆಟಿಗರನ್ನು ನೋಡಿ, ಅವರ ಹಣದ ದಾಹ, ಆಧ್ಯಾತ್ಮಿಕ ಡೆಫಿಸಿಟ್ ಇವುಗಳನ್ನು ನೋಡಿ ಮಮ್ಮಲ ಮರುಗಿದ್ದೇನೆ. (ಅಭಾವ ವೈರಾಗ್ಯ ಎನ್ನಬೇಡಿ ನೀವು).

ಬಹುಶಃ ನಿಮಗೆಲ್ಲಾ ತಿಳಿದಿರುವ ಹಾಗೆ ಕೊರವಂಜಿ ಪತ್ರಿಕೆ 1942ರಲ್ಲಿ ಪ್ರಾರಂಭವಾಗಿ ಸತತವಾಗಿ ಇಪ್ಪತ್ತೈದು ವರ್ಷಗಳ ಕಾಲ ಕನ್ನಡ ನಗೆರಸಿಕರನ್ನು ರಂಜಿಸಿ 1967ರಲ್ಲಿ ಮುಕ್ತಾಯಗೊಂಡಿತು. ಈ ಪತ್ರಿಕೆಯ ಎಲ್ಲ ಹಳೆಯ ಸಂಚಿಕೆಗಳನ್ನೂ ನಾನು ಸಂಗ್ರಹಿಸಿ ಇಟ್ಟಿದ್ದೇನೆ. ಇವುಗಳನ್ನೆಲ್ಲಾ ಸೇರಿಸಿ ಒಂದು ಸಿ.ಡಿ. ರೂಪದಲ್ಲಿ ತರುವ ಆಲೋಚನೆ ನಮಗೆ ಮೂಡಿದಾಗ ಈ ಕೆಲಸವನ್ನು ಮಾಡಲು ಅಗತ್ಯವಾದ ಧನಸಹಾಯಕ್ಕಾಗಿ ನಾವುಗಳು ಭಾರತೀಯ ವಿದ್ಯಾಭವನದ ಅಧ್ಯಕ್ಷರೂ, ನಮ್ಮ ಗೆಳೆಯರೂ ಹಾಗೂ ಅಪರಂಜಿಯ ಹಿತೈಷಿಗಳೂ ಆದ ಮಾನ್ಯ ಎನ್. ರಾಮಾನುಜ ಅವರನ್ನು ಕೇಳಿದಾಗ ಅವರು ಬಹು ಉತ್ಸಾಹದಿಂದ ಮುಂದೆ ಬಂದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಮನು ಬಳಿಗಾರ್ ಅವರೂ ಸಹಾ ಈ ಕಾರ್ಯದಲ್ಲಿ ಪಾಲ್ಗೊಂಡರು. ಶ್ರೀರಂಗ ಪಟ್ಟಣದಲ್ಲಿರುವ ಶ್ರೀರಂಗ ಟೆಕ್ನಾಲಜೀಸ್‌ನ ಯೋಗಾನಂದ ಹಾಗೂ ಅರ್ಜುನ್ ಅವರುಗಳು ಸಿ.ಡಿ. ತಯಾರಿಕೆಯ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ಈ ಸಿ.ಡಿ.ಯ ಬಿಡುಗಡೆ ಕಾರ್ಯಕ್ರಮವನ್ನು ಮಾರ್ಚ್ ಇಪ್ಪತ್ತೇಳರಂದು ಭಾರತೀಯ ವಿದ್ಯಾಭವನದಲ್ಲಿ ನಿಯೋಜಿಸಿದ್ದೇವೆ. ಕಾರ್ಯಕ್ರಮದ ವಿವರಗಳನ್ನ ಈ ಕುರಿತ ನಮ್ಮ ಪ್ರಕಟಣೆಯಲ್ಲಿ ನೋಡಬಹುದು.

ಇದೇ ಸಂದರ್ಭದಲ್ಲಿ ಅಪರಂಜಿ ಮಾಸಪತ್ರಿಕೆಯ ಅಂತರ್ಜಾಲ ಅವತರಣಿಕೆಯನ್ನು ಗಗನಕ್ಕೆ ಏರಿಸುತ್ತಿದ್ದೇವೆ. ಇನ್ನು ಮುಂದೆ ಜಗತ್ತಿನ ಯಾವ ಮೂಲೆಯಲ್ಲಾದರೂ ಕುಳಿತು ನೀವು ಅಪರಂಜಿ ಸಂಚಿಕೆಗಳನ್ನು ಓದಬಹುದು.

ಈ ಸಿ.ಡಿ. ತಯಾರಿಕೆಯ ಸಲುವಾಗಿ ನಮ್ಮ ಅಪರಂಜಿ ಬಳಗದ ಗೆಳೆಯರೆಲ್ಲಾ ಮೈಸೂರಿಗೆ ಹೋಗಬೇಕಾಗಿ ಬಂತು. ಆಗ ಈ ಮಾರ್ಚ್ ಸಂಚಿಕೆಯನ್ನು ಕ್ರಿಕೆಟ್ ಸ್ಪೆಷಲ್ ಸಂಚಿಕೆಯನ್ನಾಗಿ ತರುವ ಯೋಚನೆ ಮೂಡಿತು. ಕೇವಲ ಕೆಲವೇ ದಿನಗಳಲ್ಲಿ ನಮ್ಮ ಬರಹಗಾರರು ನಿಮಗೆ ಈ ಕ್ರಿಕೆಟ್ ಭಕ್ಷ್ಯವನ್ನು ಉಣಬಡಿಸಿದ್ದಾರೆ. ಸ್ವೀಕರಿಸಿ.

**ಶಿವಕುಮಾರ್**

**ಕೊರವಂಜಿ ಅಪರಂಜಿ ಟ್ರಸ್ಟ್ : ಭಾರತೀಯ ವಿದ್ಯಾಭವನ ಮತ್ತು**
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

******************************************************

**'ಕೊರವಂಜಿ' ಮಾಸಪತ್ರಿಕೆಯ ೨೫ ವರ್ಷಗಳ**
**ಎಲ್ಲ ಸಂಪುಟಗಳನ್ನೊಳಗೊಂಡಿರುವ**
**ಸಿ.ಡಿ. ಬಿಡುಗಡೆ ಮತ್ತು**
**'ಅಪರಂಜಿ' ಮಾಸಪತ್ರಿಕೆಯ ಅಂತರ್ಜಾಲ ತಾಣದ ಉದ್ಘಾಟನೆ**

| | |
|---|---|
| **ಸಿ.ಡಿ. ಬಿಡುಗಡೆ** | **ಪ್ರೊ. ಜಿ. ವೆಂಕಟಸುಬ್ಬಯ್ಯ**<br>ಹಿರಿಯ ವಿದ್ವಾಂಸರು |
| **'ಅಪರಂಜಿ' ಅಂತರ್ಜಾಲ ಚಾಲನೆ** | **ಶ್ರೀ ಕೆ. ಜಗದೀಶ್ ಪೈ**<br>ಎಕ್ಸಿಕ್ಯುಟಿವ್ ಡೈರೆಕ್ಟರ್,<br>ಕೆನರಾ ಬ್ಯಾಂಕ್ |
| **ಮುಖ್ಯ ಅತಿಥಿಗಳು** | **ಶ್ರೀ ಮನು ಬಳಿಗಾರ್**<br>ನಿರ್ದೇಶಕರು,<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| **ಗೌರವಾನ್ವಿತ ಆಹ್ವಾನಿತರು** | **ಪ್ರೊ. ಅ.ರಾ. ಮಿತ್ರ**<br>**ಡಾ॥ ಗುರುರಾಜ ಕರ್ಜಗಿ**<br>**ಶ್ರೀ ಶ್ರೀನಿವಾಸ ವೈದ್ಯ** |
| **ಅಧ್ಯಕ್ಷತೆ** | **ಶ್ರೀ ಎನ್. ರಾಮಾನುಜ**<br>ಅಧ್ಯಕ್ಷರು,<br>ಭಾರತೀಯ ವಿದ್ಯಾಭವನ |

**ಭಾನುವಾರ, 27ನೇ ಮಾರ್ಚ್ 2011, ಬೆಳಗ್ಗೆ 10 ಗಂಟೆಗೆ**
**ಖೀಂಚಾ ಸಭಾಂಗಣ, ಭಾರತೀಯ ವಿದ್ಯಾಭವನ**
**ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001**

## ತಮಗೆ ಆದರದ ಸ್ವಾಗತ

| | |
|---|---|
| **ಮತ್ತೂರು ಕೃಷ್ಣಮೂರ್ತಿ**<br>ನಿರ್ದೇಶಕರು<br>ಭಾರತೀಯ ವಿದ್ಯಾಭವನ | **ಎಂ. ಶಿವಕುಮಾರ್**<br>ನಿರ್ವಾಹಕ ಟ್ರಸ್ಟಿ<br>ಕೊರವಂಜಿ ಅಪರಂಜಿ ಟ್ರಸ್ಟ್ |

**(ಕಾರ್ಯಕ್ರಮದ ನಂತರ ಭೋಜನದ ವ್ಯವಸ್ಥೆ ಇದೆ)**

# ಅಸೋಸಿಯೇಷನ್ ಕ್ರಿಕೆಟ್

- ಅ.ರಾ.ಸೇ.

**ಕೌ**ಡ್ರೆ ಬರುವುದು ಇಲ್ಲವೆಂದಾದಮೇಲೆ ಬರುವ ಸೀಸನ್ ಕ್ರಿಕೆಟ್‌ನಲ್ಲಿ ಇಟ್ಟ ಆಶೆ ನಿರಾಶೆಯಾಯಿತೆಂದ ಹಾಗೇ! ಊಟಕ್ಕೆ ಕರೆದವರ ಮನೆಯಲ್ಲಿ ಆಂಬೊಡೆ ಮಾಡುತ್ತಾರೆಂದು ನಿರೀಕ್ಷಿಸಿ ಕೋಸಂಬರಿಯೇ ಹಿರಿದು ಅಡಿಗೆ ಎಂದು ಔತಣದ ಹಿಂದಿನ ದಿನವೇ ಖಾಯಂ ಆದರೆ ಹೇಗೋ ಹಾಗೆ. ''ಕಂತ್ರಿ'' ಆಟ ಎಂದು ನಾವು ಹೇಳುತ್ತಿಲ್ಲ, ಆದರೆ ಸ್ಕೋರುಗಳ ಬಗೆಗಿದ್ದ ಕುತೂಹಲ ನಾಶವಾಗಿ ಹೋಯಿತು.

ಆದುದರಿಂದ ಅಸೋಸಿಯೇಷನ್ ಕ್ರಿಕೆಟ್ ಕಡೆಗೆ ನನ್ನ ಕುತೂಹಲ ಹರಿದಿದೆ.

ಕೆಲ ದಿನಗಳ ಹಿಂದೆ ಕೊನೆಗೊಂಡ ಇಂಗ್ಲೆಂಡ್ ಮತ್ತು ವೆಸ್ಟಿಂಡೀಸ್ ಟೀಮುಗಳ ಆಟದ ವಿಷಯವಾಗಿ ಕೆಲವು ಮಾತುಗಳನ್ನು ಹೇಳದಿದ್ದರೆ ಮನಸ್ಸಿಗೆ ಶಾಂತಿ ಬರುವಂತಿಲ್ಲ. ವೆಸ್ಟಿಂಡೀಸ್ ಟೀಮು ಗೆದ್ದು ವೊರೆಲ್ ನಾಯಕತ್ವದ ಬಗೆಗೆ ವಿಶ್ವದಾದ್ಯಂತ ಪ್ರಶಂಸೆ ಬಂದಿತಷ್ಟೆ. ನನ್ನನ್ನು ಕೇಳಿದರೆ ಇಂಗ್ಲೆಂಡಿನ ಟೀಮಿನ ಆ ಶಕ್ತಿ, ವೆಸ್ಟಿಂಡೀಸರ ಶಕ್ತಿ ಎಂಬ ತಪ್ಪಾದ ಗ್ರಹಿಕೆ ಜನಕ್ಕಾಗಿದೆ. ಗ್ರಿಫಿತ್, ಕ್ಯಾರ್‍ಯು ರ್‍ಯಾಡ್ರಿಗ್ಯೂಸ್ ಇತ್ಯಾದಿ ಹೆಸರುಗಳಿರುವ ಟೀಂ ವಿಶ್ವದ ಅಗ್ರಗಣ್ಯ ಟೀಮೆಂದು ಒಪ್ಪಿಕೊಳ್ಳುವುದು ಅಸಾಧ್ಯ.

ಕಳೆದ ತಿಂಗಳು ನಡೆದ ಕ್ವಾಡ್ರ್ಯಾಂಗುಲರ್ ಟೂರ್ನಿಯಲ್ಲಿ ಸಿಟಿ ಇಲೆವೆನ್, ಕಡೆಯ ಗಳಿಗೆಯಲ್ಲಿ ಸೋತು ಹೋಗಲು ಕಾರಣವನ್ನು ಇದರಿಂದಲೇ ನಾವು ಊಹಿಸಬಹುದು. ಜೀವನದ ಯಾವುದೇ ರಂಗದಲ್ಲಿ ಧೂರ್ಧರಕರ್ ಕಾಷ್‌ಸಿಂಗ್ ಎಂಬಷ್ಟು ಉದ್ದ ಹೆಸರಿನ ವ್ಯಕ್ತಿ ಎದುರಾಳಿಯಾದಲ್ಲಿ ನಾವು ಓಹೋ ಇನ್ನು ನಮ್ಮಾಟ ಕಟ್ಟಿಡಬೇಕು, ತಲೆ ತಗ್ಗಿಸಿ ಬದುಕಬೇಕು ಎಂದು ತೀರ್ಮಾನಿಸಿಯೇ ಬಿಡುತ್ತೇವೆ. ಸಿಟಿ.. ಇಲೆವೆನ್ ಎದುರಿಸಿದ ಸಮಸ್ಯೆ ಇದೆ. ಯಾವ ಲೆಕ್ಚರರನ್ನು ಹೇಗೆ ಗೋಳು ಹುಯ್ಯುಕೊಳ್ಳಬೇಕು, ಫುಲ್ ಓವರ ಯಾವ ಬಣ್ಣದ್ದಿರಬೇಕು, ಸಿಟಿ ಬಸ್ ಸ್ಟಾಪಿಗೆ ಎಷ್ಟು ಹೊತ್ತಿಗೆ ಹೋಗಿ ಎಷ್ಟು ಹೊತ್ತು ಕಾಯಬೇಕು; ಟೀ ಪಾರ್ಟಿಯಲ್ಲಿ ಗೋಡಂಬಿ ತಟ್ಟೆಯನ್ನು ಖಾಲೀ ಮಾಡಬೇಕೇ ಬೇಡವೇ, ಸ್ಕ್ವೇರ್ ಕಟ್ ಹುಕ್ ಇತ್ಯಾದಿಗಳನ್ನೂ, ಗೂಗ್ಲಿ ಸೀಮರುಗಳನ್ನು ಹೇಗೆ ಎಗ್ಸಿಕ್ಯೂಟ್ ಮಾಡಿದರೆ ನೋಡಲು ಅಂದ, ಇತ್ಯಾದಿಗಳೇ ಆ ಹುಡುಗರ ಸಮಸ್ಯೆಗಳು. ಅಲ್ಲದೇ ವೆಂಕಟ ನರಸಿಂಹ, ಬಾಲಸುಬ್ಬಕೃಷ್ಣ ಎನ್ನುವಂತಹ ಹೆಸರುಗಳ ಭಾರ ಬೇರೆ.

ಮಫ್ಯೂಸಿಲ್ ಇಲೆವೆನ್ನಿನವರಿಗೆ ಬೆಂಗಳೂರಿಗೆ ಹೋದುದೇ ಒಂದು ಥಾನ್ಸ್! ಬೆಂಗಳೂರಿನವರನ್ನು ಗೆಲ್ಲುವುದು! ಅದು ಕನಸು ಮನಸಿನಲ್ಲೂ ಇಲ್ಲ, ಬೇಕಾಗಿಯೂ ಇಲ್ಲ, ಸಾಧ್ಯವೂ ಅಲ್ಲ. ಮೂರನೇ ದಿನ ಹನ್ನೊಂದೂವರೆಗೆ ಸೋತರೆ ಮಧ್ಯಾನ್ಹ ಖುಷಿಯಾಗಿ ಅಲಂಕಾರ್, ಲಿಬರ್ಟಿ !

ಇಂಡಸ್ಟ್ರೀಸ್ ಇಲೆವೆನ್ನಿನವರ ಮನೋಭಾವ ಬೇರೆ. ಬ್ಲಾಸ್ಟ್ ಫರ್ನೇಸಿನಿಂದ ಕಬ್ಬಿಣದ ಕುದಿದ ದ್ರವ ಹೊರಚೆಲ್ಲಿದರೆ, ತಯಾರು ಮಾಡಿಟ್ಟ ಎಂಜಿನ್ ಏಕ್ ದಂ ಸ್ಟಾರ್ಟ್ ಆಗಿ ಅಸೆಂಬ್ಲಿ ಲೈನಿನಲ್ಲೇ ಟಾಪ್ ಸ್ಪೀಡ್ ಹಿಟ್ಟಿದರೆ, ಎನ್ನುವಂತಹ ಸಮಸ್ಯೆಗಳನ್ನವರು ಎದುರಿಸಬೇಕು. ಯರ‍್ರಾ ಬಿರ‍್ರಿಯಾದ ಮೆಟಲ್ ಷೀಟು, ಕೊಡತಿಯಿಂದ ಹೊಡೆದರೆ ನಿನ್ನ ಮುಸುಡಿಗೇ ಹಿಂತಿರುಗುವೆನೆಂದು ಹೇಳುತ್ತಿದೆ. ಅದಕ್ಕೆ ಬಾರಿಸುವ ವಿಧಾನವನ್ನವರು ಕಂಡುಹಿಡಿದಿದ್ದಾರೆ. ಮರುದಿನ ಬೆಳಗ್ಗೆ ಮಿಲ್ಲಿಗೆ ಹೋದಾಗ ಲಾಕೌಟ್ ದೊಂಬಿ ನಡೆದರೆ ಯಾವ ಪಟ್ಟುಗಳಿಂದ ದುಷ್ಮನ್ನುಗಳನ್ನು ಖತಂ ಮಾಡಬೇಕೆಂದು ಅವರು ಬಲ್ಲರು. ಮೇಘನಾದ ಖತೀಜಿಯಾ ಮ್ಯಾಚಿನ ಹಿಂದಿನ ದಿನ ಕಾಳಿ ದೇವಾಲಯದಲ್ಲಿ ''ಹೇ ಭದ್ರಕಾಳಿ, ನಾಳಿನ ದಿನ ಮ್ಯಾಚಿನಲ್ಲಿ ಎಂಟು ವಿಕೆಟ್ಟುಗಳನ್ನಾಗಲೀ ಎದುರಾಳಿಗಳನ್ನಾಗಲೀ ಬಲಿ ತೆಗೆದುಕೊಳ್ಳುವಂತೆ ಮಾಡು'' ಎಂದು ಪ್ರಾರ್ಥಿಸಿದನೆಂದು ವದಂತಿ ಹಬ್ಬಿದರೆ, ಐಸ್‌ಕ್ರೀಂ ಕೌಂಟರಿನಲ್ಲಿ ಪಂಟುಬಡಿಯುವುದರಲ್ಲಿ ನಿಷ್ಣಾತನಾದ ನಗರದ ಬಚ್ಚನ ಮನೋಭಾವ ಹೇಗಿರಬಹುದು? ಅಂಪೈರುಗಳಿಗೆ ಸೀ ಸೀ ಹೊಡೆಯುವೆವೆಂದುಕೊಂಡಿದ್ದರೆ ಅಲ್ಲಿಯೂ ಬ್ರಮ ನಿರಸನ. ಪರ್ಸಾನೆಲ್ ಮ್ಯಾನೇಜರುಗಳ ತಲೆಗಳನ್ನೇ ಹಿಂದಿರುಗಿಸಿ ದಿಗ್ಭ್ರಮೆ ಹಿಡಿಸಿದ ಜನಕ್ಕೆ ಅಂಪೈರುಗಳು ಯಾವ ಮಹಾ !

ಹೀಗಾಗಿ 50, 60 ಹೊಡೆದ ಸಿಟಿ ಹುಡುಗರು ಏಕ್ ದಂ ಔಟಾದುದಾಗಲೀ ಪಟಪಟನೆ ವಿಕೆಟ್ಟುಗ್ಗಳುರುಳುತ್ತಿದ್ದಾಗ ಬಂದ ಸುಬಾಹು ಝುಂ ಝುಂ ವಾಲಾ 60, 70 ಹೊಡೆದು ವೆಂಕಟ, ಕೃಷ್ಣ, ಸುಬ್ಬ, ನರಸಿಂಹನ್ ಮೊದಲಾದವರ ಮುಖದಲ್ಲಿ ನೀರಿಳಿಸಿದುದಾಗಲೇ ದೊಡ್ಡದಲ್ಲ.

ನಾವು, ಇತರರೊಡನೆ ಕಳೆದ ಹಲವಾರು ವರ್ಷಗಳಿಂದಲೂ ಹೇಳುತ್ತಾ ಬಂದಿರುವಂತೆ ನಮ್ಮ ರಾಜ್ಯದಲ್ಲಾಗಲೀ ನಮ್ಮ ರಾಷ್ಟ್ರದಲ್ಲಾಗಲೀ ಕ್ರಿಕೆಟ್ ಕ್ರೀಡಾ ಪಟುಗಳಿಗೆ ಬರಗಾಲವಿಲ್ಲ. ಮಟ್ಟ ಉನ್ನತವಾಗಿಯೇ ಇದೆ. ಆದರೂ ಮೊನ್ನೆ ನಮ್ಮ ಹುಡುಗರು ತಮಗೆ ಎಲ್ಲಾ ವಿಧದಲ್ಲಿಯೂ ಸ್ವಲ್ಪ ಕೆಳಮಟ್ಟದ್ದಾಗ ನೆರೆರಾಜ್ಯದ ಟೀಮಿಗೆ ಫಸ್ಟ್ ಇನ್ನಿಂಗ್ಸ್ ಲೀಡ್ ಕೊಟ್ಟುದು ಎಷ್ಟು ಶೋಚನೀಯ. ಮಿಲ್ಖಾಸಿಂಗ್ ಹಿಂದೆಂದೋ ಸೆಂಚುರಿ ಹೊಡೆಯುತ್ತಿದ್ದನೆಂಬ ಕಾರಣಕ್ಕಾಗಿ ಆತ ನಮ್ಮೂರಿಗೂ ಸೆಂಚುರಿ ಹೊಡೆಯಲು ಬಿಡಬೇಕೇ? ಅಥವಾ ಅವನ ಹೆಸರು ನೋಡಿ ಹ್ಯಾಮರ್ ಬೀಟ್ಸ್ ಡಿಪಾರ್ಟ್‌ಮೆಂಟಿನ ಹರ್ಜಿಂದರ್ ಸಿಂಗ್ ಎಂದುಕೊಂಡರೋ?

ನಮ್ಮ ಮುಗಿಲು ಹಳ್ಳಿಯಲ್ಲಿ ಇದ್ದದ್ದು ಹಾಗೆಯೇ. ಆಟಗಾರರಿಗೆ ಕೊರತೆ ಇಲ್ಲ. ಆದರೆ ಅವರಿಗೆ ನೈಚ್ಯ ಮನೋಭಾವ. ಎಂಜಿನಿಯರಿಂಗ್ ಕಾಲೇಜ್ ಟೀಮಿನಲ್ಲಿ ಏಳು ವರ್ಷಗಳ ಹಿಂದೆ ಎಂ.ಜಿ.ಎಸ್. ಫೈನಲ್ಸ್‌ನಲ್ಲಿ ಡಬಲ್ ಸೆಂಚುರಿ ಹೊಡೆದು ಆಚಾರ್ಯ ಷೀಲ್ಡ್ ಲೀಗಿನಲ್ಲಿ ಸೆಂಚುರಿ ಹೊಡೆಯುತ್ತಿದ್ದು ಇತ್ತೀಚೆಗೆ ಮಿರ್ಜಾ ಷೀಲ್ಡ್ ಸೀಇಯಲ್ಲಿ ಲೀಗಿನಲ್ಲಿ ಎ

ಫಾಲ್ಟ್‌ಲೆಸ್ 14 ಹೊಡೆದ ಇಂಥಾವನ ತಮ್ಮ ಇದ್ದಾನೆ ಎಂದು ಸುದ್ದಿ ತಿಳಿದ ಕೂಡಲೇ ಮುಂದಿನ ಎಂ.ಜಿ. ಮ್ಯಾಚಿನಲ್ಲಿ ಅವನಿಗೆ ಒಂದು ಸೆಂಚುರಿ ಕೊಡಲೇಬೇಕು ಎಂದು ತೀರ್ಮಾನಿಸಿಬಿಡುತ್ತಾರೆ.


ಅಂದ ಹಾಗೆ ನಮ್ಮೂರಿನ ಹುಡುಗರು ವೆಸ್ಟಿಂಡೀಸಿನ ಪಕ್ಷಪಾತಿಗಳು. ಅವರು ವರ್ಣವಿಭೇದ ನೀತಿಯ ವಾದಕ್ಕೆ ವೆಸ್ಟಿಂಡೀಸರು ಇಂಗ್ಲಿಷರಿಗೆ ಚಳ್ಳೇಹಣ್ಣು ತಿನ್ನಿಸಿದ್ದೇ ಸರಿಯಾದ ಉತ್ತರವೆಂದು ಹೇಳುತ್ತಾ ಸ್ವಂತ ಖರ್ಚಿನಲ್ಲಿ ಟೀ ಪಾರ್ಟಿಗಳನ್ನು ಕೊಡುತ್ತಿದ್ದಾರೆ. ಅದೇ ಕಾಲದಲ್ಲಿ ನಮ್ಮೂರಿನ ಕ್ರಿಕೆಟ್ ಮಟ್ಟವನ್ನು ಎತ್ತರಿಸಿ ಕೊನೆಯ ಪಕ್ಷ ಇನ್ನೂರು ಅಡಿಗಳಿಗಾದರೂ ತರಬೇಕೆಂದು ಆಲೋಚಿಸಿದ್ದಾರೆ.


ಕಬ್ಬಿಣ ನೇಗಿಲಿನಿಂದ ಮಾಗಿ ಹೊಡೆಯುವ ಕ್ವಿಂಟಲ್ ತೂಕದ ಚೀಲಗಳನ್ನು ಅನಾಯಾಸವಾಗಿ ಲಾರಿಯ ಮೇಲಕ್ಕೊಗೆದುಬಿಡುವ ನಮ್ಮ ಹೈಕಳ ಕೈಗಳಿಗೆ ಅಸೋಸಿಯೇಷನ್ ಕ್ರಿಕೆಟ್‌ನಲ್ಲಿ ಉಜ್ವಲ ಭವಿಷ್ಯವಿದೆ. ಆದರೆ ಅವರು ಮಸಾಲೆದೋಸೆ, ಕಾಫಿ, ಮಂಡಕ್ಕಿ ಖಾರ, ವಡೆ, ಮೆಣಸಿನ್ಕಾಯಿ ಇತ್ಯಾದಿಗಳನ್ನು ತಿನ್ನುತ್ತಿರುವುದನ್ನು ಬಿಟ್ಟು ಮೀಸೆ ಗಡ್ಡಗಳನ್ನು ಬೆಳೆಸಿ ತಲೆ ಕೆದರಿಕೊಂಡು ಫೀಲ್ಡಿಗಿಳಿದು ಅಂಗಿಯ ತೋಳು ಮೇಲೇರಿಸಬೇಕು.

**''ಅ.ರಾ.ಸೇ. ಅವರ ಆಯ್ದ ನಗೆ ಬರಹಗಳು''**

✵

---





# ಕ್ರಿ'ಕೆಟ್ಟಾಟದ' ಸಂಕಟ

**- ಭುವನೇಶ್ವರಿ ಹೆಗಡೆ**

**ಭಾ**ರತದ ತಂಡ ಪಾಕಿಸ್ತಾನಕ್ಕೆ ಕ್ರಿಕೆಟ್ ಆಡಲು ಹೋದ ದಿನದಿಂದ ಲೀಲಕ್ಕನ ಮನೆಯಲ್ಲಿ ಸ್ನೇಹ ಸರಣಿ ವ್ಯವಹಾರ ಮೊದಲಿಟ್ಟಿತು. ಲೀಲಕ್ಕನ ಗಂಡ ಬಾಲಣ್ಣ ಮಹಾ ಕೋಪಿಷ್ಠ. ಸರ್‍ರಂತ ಸಿಟ್ಟು ನೆತ್ತಿಗೇರಿ ಇದ್ದವರ ಮೇಲೆಲ್ಲಾ ಹಾರಾಡಿ ಕೈಗೆ ಸಿಕ್ಕ ವಸ್ತುಗಳನ್ನು ಎತ್ತಿ ಎಸೆಯೋದು, ಕೂಗೋದು ಮಾಡುವವ. ಲೀಲಕ್ಕ ಸಮಾಧಾನಿ. ಗಂಡನ್ನ, ಅತ್ತೇನ, ಮಕ್ಕಳನ್ನು ಎಲ್ಲರನ್ನೂ ಶಾಂತರೀತೀಲಿ ಸಮಾಧನ ಪಡಿಸಿ ಸುಸ್ತಾದಳು. ಮಕ್ಕಳಿಗೋ ಮನೆಯೆಂದರೆ ಮನೆಯಲ್ಲ, ಕ್ರೀಡಾಂಗಣ, ಯುದ್ಧರಂಗ, ರಂಗಮಂದಿರ ಹೀಗೆಲ್ಲ ಒಬ್ಬರಿಗೊಬ್ಬರು ಜಗಳ ಹತ್ತಿಕೊಂಡರೆ (ಹತ್ತಿಕೊಂಡೇ ಇರುತ್ತದೆ) ತೀರ್ಮಾನ ಕೊಡುವುದು, ತಪ್ಪು ಯಾರದು ಎಂದು ತೀರ್ಮಾನಿಸುವುದು, ತಂದೆ-ತಾಯಿ ಇಬ್ಬರು ಅಂಪೈರುಗಳ ಹತ್ತಿರವೂ ಆಗದೆ ಥರ್ಡ್ ಅಂಪೈರ್ ಅತ್ತೆಯ ಬಳಿಯೇ ಕೇಸು ಹೋಗಿ ನಿರ್ಧಾರವಾಗಬೇಕು. ಕ್ರೀಡಾಳುಗಳೇನು ತುಂಬಾ ದೊಡ್ಡ ಜನ ಅಲ್ಲ, ಚಿಕ್ಕದು ಪಿಂಕಿ ಎಲ್ಕೇಜಿ, ದೊಡ್ಡವ ವೆಂಕಿ ಐದನೇ ಕ್ಲಾಸ್.

ಇಡೀ ಕ್ರೀಡಾಂಗಣವನ್ನು ತಲೆಕೆಳಗು ಮಾಡಬಲ್ಲ 'ಕ್ರೀಡಾಸಕ್ತರು' ಇಬ್ಬರೂ !

ಸರಿ, ಮಕ್ಕಳ ಪರೀಕ್ಷೆಯ ಟೈಂಟೇಬಲ್ಲು, ಕ್ರಿಕೆಟ್ ಟೆಸ್ಟ್ ನಡೆಯುವ ಟೈಂಟೇಬಲ್ಲು ಒಟ್ಟಿಗೆ ಪ್ರಕಟವಾಗಿತ್ತು. ಎರಡಕ್ಕೂ ಸಮಯ ಹೊಂದಿಸೋದು, ಲೀಲಕ್ಕನ ಮೇಲೆ ಬಂದೆರಗಿದ ಮೊದಲ ಪೇಚು. ಮಕ್ಕಳ ಕ್ರಿಕೆಟ್ ಹುಚ್ಚು ಆ ವಠಾರದಲ್ಲಿ ಎಲ್ಲರಿಗೂ ಗೊತ್ತು. ಹೆಚ್ಚಿನವರ ಮನೆಯ ಕಿಟಕಿ ಗಾಜು ಹೂದೋಟಗಳಿಗೆ ಅವರ ಬ್ಯಾಟಿಂಗ್ ಬಿಸಿ ತಾಗಿ ಮಕ್ಕಳಿಗೆ ಬಿಸಿ ಮುಟ್ಟಿಸಿದ್ದೂ ಆಗಿದೆ. 'ಪರೀಕ್ಷೆ ಯಾವಾಗೆಲ್ಲ ಇದೆಯೋ ವೆಂಕಿ' ಅಂದ್ರೆ, 'ಗುರುವಾರ ಮ್ಯಾಥ್ಸ್ ಮ್ಯಾಚ್, ಇಂಗ್ಲಿಷ್ ಮ್ಯಾಚ್ ಶುಕ್ರವಾರ, ಮುಂದಿನ ವಾರ ಫೈನಲ್' (ಕೊನೆಯ ಪರೀಕ್ಷೆ), ಹೀಗೆ ಕ್ರಿಕೆಟ್ ಭಾಷೆಯಲ್ಲಿಯೇ ವರ್ಣನೆ ಮಾಡುತ್ತಿದ್ದ.

ಉದಾಹರಣೆ, ಸಮಾಧಾನ, ದೃಷ್ಟಾಂತ- ಎಲ್ಲವೂ ಪೂರ್ತಿ ಕ್ರಿಕೆಟ್ಟಿನದ್ದೇ. ಇನ್ನು ನಾಲ್ಕು ಲೆಕ್ಕ ಮಾಡಿದರೆ ಬೌಂಡರಿ ಬಾರಿಸಿದರೆ ಫಸ್ಟ್ ಇನ್ನಿಂಗ್ಸ್ ಆದ ಹಾಗೆ. ಊಟ ಆದ ಮೇಲೆ ಚಕಾ ಚಕ್ ಸಿಕ್ಸರ್ ಬಾರಿಸಿ ಸೆಕೆಂಡ್ ಇನ್ನಿಂಗ್ಸ್ ಪ್ರಾರಂಭಿಸೋದು ಎಂದೆಲ್ಲ ವಿವರಣೆ ನೀಡುತ್ತಿದ್ದ. ಅದರ ನಡುವೆಯೂ ಅವನ ತಾಯಿ ಪ್ರಶ್ನೆ ಕೇಳಿ ಉತ್ತರ ಪಡೆದುಕೊಂಡು ಪರೀಕ್ಷೆಗೆ ಸಿದ್ಧಪಡಿಸುವ ತುಂಬಾ ಕಷ್ಟದ 'ಕೋಚ್' ಆಗಿ ಏದುಸಿರು ಬಿಡುತ್ತಿದ್ದಳು. ಒಂದು ಕಡೆಯಿಂದ ಪ್ರಶ್ನೆಗೆ ಉತ್ತರ ಹೇಳಲು ಒತ್ತಾಯಿಸಿದರೆ 'ಸ್ವಲ್ಪ ನಿಧಾನಕ್ಕೆ ಕೇಳಮ್ಮ, ಶೋಹಿಬ್ ಅಖ್ತರ್ ಥರಾ ಫಾಸ್ಟ್ ಬಾಲ್ ಮಾಡಿದ್ರೆ ನಾನು ಬ್ಯಾಟ್ ಮಾಡೋದಾದ್ರೂ ಹೇಗೆ?' ಎಂಬ ಉತ್ತರ ಬರುತ್ತಿತ್ತು. ತಾಯಿಗೆ ನಗು ಬಂದರೂ ತೋರಿಸಿಕೊಳ್ಳುವಂತಿಲ್ಲ.

ಮಗು ತಮಾಷೆಗೆ ಉತ್ತರ ಕೊಡುತ್ತಿದ್ದನೋ ಆ ಪ್ರಯತ್ನಪೂರ್ವಕವಾಗಿ ಹಾಗೆ ಉತ್ತರ ಬಂದುಬಿಡುತ್ತಿತ್ತೋ 'ಕೋಚ್' ಆದ ಅಮ್ಮನಿಗೆ ತಿಳಿಯುತ್ತಿರಲಿಲ್ಲ. ಒಂದು ದಿನ ಕನ್ನಡದ ಉತ್ತರ ಪಡೆಯಲು ಹಠ ತೊಟ್ಟು ಕುಳಿತಳು. ಒಂದಕ್ಕೆ ಒಂದೂವರೆ ಉತ್ತರ ಬರುವ ಹೊತ್ತು. ಉಳಿದ ಮನೆಗಳಲ್ಲಿ ಟಿವಿಯಲ್ಲಿ ಫೈನಲ್ ಮ್ಯಾಚ್ ಕೋಲಾಹಲ. ಇವರ ಮನೆಯಲ್ಲಿ ಮಾತ್ರ ಫೈನಲ್ ಎಕ್ಸಾಮ್ ತಯಾರಿಯ ಹಾಲಾಹಲ. ಪ್ರಶ್ನೆ ಶುರು ಮಾಡಿದಳು, ತಾಯಿ. ಉತ್ತರ ಕುಮಾರ ಕ್ರಿಕೆಟ್ ಪಿಚ್‌ನಿಂದಲೇ ವಾಕ್ಯ ಆಯ್ದು ತರುತ್ತಿದ್ದ. ಬೇರೆ ಬೇರೆ ಪಾಠದ ಪ್ರಶ್ನೆಗಳು ಹೀಗಿದ್ದವು. ನಿಜ ಉತ್ತರ ಬ್ರಾಕೆಟ್‌ನಲ್ಲಿ.

ಪ್ರಶ್ನೆ : ಲಕ್ಷ್ಮಣನಿಗೆ ಏಕೆ ಸಂತೋಷವಾಯಿತು?

(ಅಣ್ಣ ರಾಮನು ತನ್ನನ್ನು ಕಾಡಿಗೆ ಕರೆದೊಯ್ಯಲು ಒಪ್ಪಿದ್ದಕ್ಕಾಗಿ ಲಕ್ಷ್ಮಣನಿಗೆ ಸಂತೋಷವಾಯಿತು)

ಮಗು : ಶತಕ ಬಾರಿಸಿ ಮತ್ತೂ ಏಳು ರನ್ನು ಹೊಡೆದದ್ದಕ್ಕಾಗಿ ಲಕ್ಷ್ಮಣನಿಗೆ ಸಂತೋಷವಾಯಿತು

ಪ್ರಶ್ನೆ : ಸೌರವನು ಏನು ತಿನ್ನುತ್ತಿದ್ದನು?

(ಹಣ್ಣು ಹಂಪಲುಗಳನ್ನು ತಿನ್ನುತ್ತಿದ್ದನು)

ಮಗು : ತನ್ನವರು ಕ್ಯಾಚ್ ಬಿಟ್ಟಾಗ ಟೆನ್ಷನ್‌ನಿಂದ ಉಗುರು ತಿನ್ನುತ್ತಿದ್ದನು

ಪ್ರಶ್ನೆ : ಬಿರುಗಾಳಿ ಬಂದಾಗ ಏನಾಗುತ್ತದೆ?

(ಗಿಡ ಮರಗಳು ಭೂಮಿಗುರುಳುತ್ತವೆ)

ಮಗು : ಬಿರುಗಾಳಿಯಂತೆ ವೇಗದ ಬಾಲು ಬಂದಾಗ ಬ್ಯಾಟು ತುಂಡಾಗುತ್ತದೆ

ತಾಯಿ ಕಂಗೆಟ್ಟಳು


''ಮಗನಿಗೆ ನಾನು ಕೋಚ್ ಆಗಲಾರೆ, ನೀವೇ ನೋಡಿಕೊಳ್ಳಿ'' ಎಂದು ಗಂಡನಿಗೆ ವಹಿಸಿದಳು.

ಅಪ್ಪ ಮಗ ಅದೇನು ಮ್ಯಾಚ್ ಫಿಕ್ಸಿಂಗ್ ಮಾಡಿದರೋ ಗೊತ್ತಿಲ್ಲ, ಓದು, ಉತ್ತರ ಎಲ್ಲಾ ಸಾಂಗವಾಗಿ ನೆರವೇರಿತು. ಕೊಟ್ಟ ಮಾತಿಗೆ ತಪ್ಪದ ತಂದೆ ಇಡೀ ಸ್ನೇಹ ಸರಣಿ ಕ್ರಿಕೆಟ್ ಮ್ಯಾಚಿನ ಸಿ.ಡಿ. ಕ್ಯಾಸೆಟ್ಟನ್ನು ಮಗನ ಕೈಗೆ ತಂದಿತ್ತಿದ್ದಾರೆ. ಅವರ ಮನೆಯಲ್ಲೀಗ ನಿತ್ಯ ಕ್ರಿಕೆಟ್ ಗದ್ದಲ, ಹರ್ಷೋದ್ಗಾರ, ಬೊಬ್ಬೆ ಸಿಳ್ಳೆ, ಪರೀಕ್ಷೆ ಹೇಗೋ ಮುಗಿದಿದೆ.

ಕ್ರಿಕೆಟ್ಟನ್ನೇ ಉಣ್ಣಿರಿ, ಕ್ರಿಕೆಟ್ಟನ್ನೇ ಕುಡಿಯಿರಿ, ಕ್ರಿಕೆಟ್ಟನ್ನೇ ಬದುಕಿರಿ ಎಂಬ ಕ್ರಿಕೆಟ್ ಜಾಹೀರಾತು ಲೀಲಕ್ಕನ ಮನೆಯಲ್ಲೀಗ ನಿತ್ಯ ಪ್ರಸಾರವಾಗುತ್ತಿದೆ.

**'ಬೆಸ್ಟ್ ಆಫ್ ಭುವನೇಶ್ವರಿ' ಸಂಗ್ರಹದಿಂದ ಆಯ್ಕೆ**

✵




# ಶಾಂತಿಗಾಗಿ ಕ್ರಿಕೆಟ್

**- ಬಾಗೂರು ಚಂದ್ರು**

**ದೃಶ್ಯ ಒಂದು :** ರಾಮರಾಯರು ಸೀತಮ್ಮನವರ ಮನೆ. ರಾಯರಿಗೆ ರಿಟೈರ್ ಆಗಿ ಐದು ವರ್ಷವಾಗಿದೆ. ನೆಮ್ಮದಿಯ ಜೀವನ, ಸುಂದರ ಮನೆ, ಇಬ್ಬರು ಮಕ್ಕಳು ದೂರದೂರಿನಲ್ಲಿ ಒಳ್ಳೆಯ ಕೆಲಸದಲ್ಲಿದ್ದಾರೆ. ಇಲ್ಲಿಯ ಪ್ರಶಾಂತ ವಾತಾವರಣದಲ್ಲಿ ಸ್ವತಃ ನಿಂತು ಕಟ್ಟಿಸಿದ ಮನೆಯ ಆರೈಕೆ. ಸುತ್ತಲಿನ ತೋಟದ ಉಸ್ತುವಾರಿಯಲ್ಲಿ ಹಿರಿಯ ದಂಪತಿಗಳ ವೇಳೆ ಹೋಗುತ್ತದೆ.

ದೊಡ್ಡ ಮಗನಿರುವ ಊರಿನಲ್ಲಿ ಪ್ರವಾಹವಂತೆ, ಮಕ್ಕಳಿಗೆ ಒಂದು ತಿಂಗಳು ರಜ ಕೊಟ್ಟಿದ್ದಾರೆ. ಅವರನ್ನು ನಿಮ್ಮ ಊರಿಗೆ ಕಳುಹಿಸಿಕೊಡುತ್ತಿದ್ದೇನೆ ಎಂದು ಕಾಗದ ಬಂದಾಗ ರಾಮರಾಯರಿಗೆ ಅವರಿಗಿಂತ ಹೆಚ್ಚಾಗಿ ಸೀತಮ್ಮನವರಿಗೆ ತುಂಬಾ ಖುಷಿಯಾಗಿತ್ತು. ಹತ್ತು ಹನ್ನೆರಡು ವರ್ಷಗಳ ಘಟಿಂಗ ಮಕ್ಕಳು ಬಂದರು. ಮೊದಲ ದಿನ ಮಕ್ಕಳಾಟ ನೋಡಿ ಸಂತೋಷವಾಯಿತು. ಎರಡನೆಯ ದಿನ ಹೇಗೋ ಸಹಿಸಿಕೊಂಡರು. ಆದರೆ ಗೃಹಪ್ರವೇಶದಲ್ಲಿ ಸ್ನೇಹಿತ ಕೊಟ್ಟಿದ್ದ ಅಲಂಕಾರದ ದೀಪಗಳು, ಸೀತಮ್ಮನವರು ಖುದ್ದಾಗಿ ಮಾಡಿದ್ದ ಇಂಜಕ್ಷನ್ ಟ್ಯೂಬಿನ ರಥ ಮಕ್ಕಳಾಟದಲ್ಲಿ ಚೂರುಚೂರಾದಾಗ, ಪಾಲಿಷ್ ಮಾಡಿದ ತೇಗದ ಬಾಗಿಲುಗಳು, ಹಾಲಿನಲ್ಲಿ ಹೊಸದಾಗಿ ಹಾಕಿದ್ದ ಸೋಫಾಸೆಟ್ ಇವರ ಆಘಾತಕ್ಕೆ ನಲುಗಿದಾಗ ಮಗ ಪ್ರವಾಹವನ್ನು ಇಲ್ಲಿಗೆ ಕಳುಹಿಸಿ ಮಕ್ಕಳನ್ನು ಅಲ್ಲಿಯೇ ಇಟ್ಟುಕೊಂಡಿದ್ದರೆ ಚೆನ್ನಾಗಿರುತ್ತಿತ್ತಲ್ಲ ಎನಿಸಿತು.

ಮಕ್ಕಳು ಬಂದು ಇನ್ನು ಮೂರೇ ದಿನ ಆಗಿದೆ. ತಿಂಗಳಿಗೆ ಒಟ್ಟು ಮೂವತ್ತು ದಿನ ಎಂದು ಪರಿತಪಿಸುವಾಗ ರಾಯರಿಗೆ ಕಾಣಿಸಿತು ಶಾಂತಿಗಾಗಿ ಕ್ರಿಕೆಟ್ ಎನ್ನುವ ದೊಡ್ಡ ಬ್ಯಾನರ್. ರಾಯರು ಸಂದೇಶವನ್ನು ಗ್ರಹಿಸಿದರು. ಕ್ರೀಡಾ ಸಾಮಾನುಗಳ ಅಂಗಡಿಗೆ ಹೋಗಿ ಒಂದು ಕ್ರಿಕೆಟ್ ಸೆಟ್ ಕೊಂಡು ಆಟೋದಲ್ಲಿ ಮನೆಗೆ ತಂದು ಪ್ರೀತಿಯ ಮೊಮ್ಮಕ್ಕಳಿಗೆ ರಸ್ತೆಯ ಮೂಲೆಯಲ್ಲಿರುವ ಖಾಲೀ ಸೈಟ್ ತೋರಿಸಿದರು. ಈಗ ಮಕ್ಕಳು ಇದೇ ಬೀದಿಯ ಇನ್ನೂ ಕೆಲವರು ದಾಂಡಿಗರೊಂದಿಗೆ ಬೆಳಗಿನಿಂದ ರಾತ್ರಿಯವರೆಗೂ ಕ್ರಿಕೆಟ್ ಆಡುತ್ತಾರೆ. ಊಟ ತಿಂಡಿಗಾಗಿ ಮಾತ್ರ ಮನೆಗೆ ಬರುತ್ತಾರೆ. ಮನೆಯಲ್ಲಿ ಶಾಂತಿ ತಂದಿದೆ.

**ದೃಶ್ಯ ಎರಡು :** ಕಾಲೇಜ್ ಆವರಣ, ಅವನು ಯುವಕ, ಅವಳು ಯುವತಿ. ಅವಳ ಕಣ್ಣಿನಲ್ಲಿ ಇವನು ನಕ್ಷತ್ರ ನೋಡುತ್ತಾನೆ. ಇವನ ಚಿಗುರು ಮೀಸೆಯ ಹಿಂದಿನ ಮಂದ ಹಾಸದಲ್ಲಿ ಅವಳು ಸ್ವರ್ಗವನ್ನು ಹುಡುಕುತ್ತಾಳೆ. ಒಲವೇ ಅವರ ಬದುಕು. ಇಲ್ಲ ಸ್ವಲ್ಪ ತಾಳಿ, ಸುಂದರ – ಅದು ಯುವಕನ ಹೆಸರು. ಫುಟ್ ಬಾಲ್ ಆಟಗಾರ. ಐದು ದಿನ ಪ್ರತಿದಿನ ಆರು ಆರು ಗಂಟೆ ಆಡಿ ಕೊನೆಗೆ ಡ್ರಾ ಎಂದು ಹೇಳುವ ಕ್ರಿಕೆಟ್ ಅಂದರೆ ಅವನಿಗೆ ಕಿಡಿಕಿಡಿ.

ಆದರೆ ಶಾಂತಿ – ಯುವತಿಯ ಹೆಸರು. ಕ್ರಿಕೆಟ್ ಬೀಸಣಿಗೆ. ಅವಳಣ್ಣ ಮೂರನೆಯ ದರ್ಜೆ ಲೀಗಿನ ಎರಡನೆಯ ಟೀಮಿನ ಹದಿಮೂರನೆಯ ಆಟಗಾರ. ಅದಕ್ಕಿಂತ ಮುಖ್ಯವಾಗಿ

ಗಾವಸ್ಕರ್, ಸೋಮವಾರ ಅಮಾವಾಸ್ಯೆ ಇದ್ದಾಗ ಎಷ್ಟು ಬಾರಿ ಔಟಾಗಿದ್ದಾನೆ, ಮಾರ್ಷಲ್ ಓಡಿಬರುವಾಗ ಎಷ್ಟು ಸಾರಿ ಜಾರಿ ಬಿದ್ದಿದ್ದಾನೆ, ಗಾಳಿಯಲ್ಲಿ ಟೋಪಿ ಹಾರಿಸಿಕೊಂಡಿದ್ದರಲ್ಲ ಯಾವ ಅಂಪೈರ್‌ದು. ವಿಶ್ವ ದಾಖಲೆ ಮುಂತಾದ ಅತಿ ಅಮೂಲ್ಯ ಮಾಹಿತಿಯನ್ನು ತುದಿನಾಲಿಗೆಯಲ್ಲಿ ಇಟ್ಟುಕೊಂಡಿದ್ದಾನೆ. ಕ್ರಿಕೆಟ್ ತಿಳಿದಿಲ್ಲದವರು ಅನಾಗರಿಕರು ಎನ್ನುವ ಭಾವನೆ.

ಸುಂದರ ಶಾಂತಿಯರ ಈ ಭಿನ್ನಾಭಿಪ್ರಾಯ ಅವರ ಪ್ರಣಯದ ಮೇಲೆ ಕರಾಳ ಛಾಯೆ ಬೀರುತ್ತದೆಯೇ ಎನ್ನುವ ಅನುಮಾನ ಬರುತ್ತಿರುವಾಗಲೇ ಸುಂದರನಿಗೆ ಕಾಣಿಸಿತು ಶಾಂತಿಗಾಗಿ ಕ್ರಿಕೆಟ್ ಎನ್ನುವ ಘೋಷಣೆ.

ಸುಂದರ ನಿಧಾನ ಮಾಡಲಿಲ್ಲ, ಗಾವಸ್ಕರ್, ಕಪಿಲ್ ದೇವ್, ವಿಸ್ಡನ್ ಮೊದಲಾದ ಪುಸ್ತಕಗಳನ್ನು ಕೊಂಡ. ಕ್ರಿಕೆಟ್ ವಿಚಾರ ಓದಿಕೊಂಡ. ಈಗ ಅವನು ಫುಟ್‌ಬಾಲ್ ಮೈದಾನದ ಕಡೆಯೂ ಹಣಕುವುದಿಲ್ಲ, ಎನ್ನ ಪ್ರೀತಿಯ ಶಾಂತಿಗಾಗಿ ಕ್ರಿಕೆಟ್ ಅಭಿಮಾನಿಯಾಗಿದ್ದಾನೆ.

**ದೃಶ್ಯ ಮೂರು :** ನರಸಿಂಹ ಶಾಸ್ತ್ರಿಗಳ ಮನೆ. ಶಾಸ್ತ್ರಿಗಳ ತಂದೆ ನರಸಿಂಹ ಶ್ರೋತ್ರಿಯರು ವೇದ, ಆಗಮ, ಸಾಹಿತ್ಯ, ಮೀಮಾಂಸೆ ಎಲ್ಲದರಲ್ಲಿಯೂ ಘನ ಪಂಡಿತರು. ಶೃಂಗೇರಿಯಲ್ಲಿ ವೇದ ಪಾಠ ಮಾಡುತ್ತಿದ್ದ ಶ್ರೀಮನ್ಮಹಾರಾಜರಿಂದ, ಶ್ರೀ ಜಗದ್ಗುರುಗಳಿಂದ ವರ್ಷ ವರ್ಷವೂ ಜೋಡಿ ಶಾಲು ಬಹುಮಾನ ಪಡೆಯುತ್ತಿದ್ದ ವಿದ್ವಾಂಸರು. ಮಗನಿಗೆ ತಂದೆಯಷ್ಟು ವಿದ್ವತ್ತಿಲ್ಲದಿದ್ದರೂ ಪೂರ್ವ, ಪವರ ಎರಡರಲ್ಲಿಯೂ ಸಾಕಷ್ಟು ಅನುಭವವಿದೆ. ಅವರು ವಾರಕ್ಕೆ ಮೂರು ದಿನವಾದರೂ ತುಪ್ಪದಲ್ಲಿ ಕೈ ತೊಳೆದುಕೊಳ್ಳುತ್ತಾರೆ - ತಿಥಿ ಮನೆಯಲ್ಲಿ ಊಟ ಮಾಡುವಾಗ.

ಆದರೆ ಶಾಸ್ತ್ರಿಗಳಿಗೆ ಮಗ ತಮ್ಮ ಕಸುಬು ಮುಂದುವರಿಸಬಾರದು ಎನ್ನಿಸಿದೆ. ಇಂಗ್ಲಿಷ್ ಮೀಡಿಯಂ ಶಾಲೆಯಲ್ಲಿ ಓದುತ್ತಿರುವ ಅವನು ಬೂಡ್ಸ್ ಹಾಕಿಕೊಂಡೇ ಟೇಬಲ್ ಮೇಲೆ ತಟ್ಟೆ ಇಟ್ಟುಕೊಂಡು ಊಟ ಮಾಡುವುದನ್ನು ನೋಡಿ ಹರ್ಷಿಸುತ್ತಾರೆ.

ಪ್ರೀತಿಯ ಮಗ ಹುಟ್ಟಿದ ಹಬ್ಬಕ್ಕೆ ಕ್ರಿಕೆಟ್ ಸೆಟ್ ಬೇಕು ಎಂದು ಕೇಳಿದ್ದಾನೆ. ಆದರೆ ಹೋದ ತಿಂಗಳಲ್ಲಿ ಪಿತೃ ಪಕ್ಷ, ತಮಗೆ ಆಫ್ ಸೀಸನ್, ದುಡ್ಡು ಎಲ್ಲಿ ತರಲಿ ಎಂದು ಯೋಚಿಸುತ್ತಿದ್ದ ಶಾಸ್ತ್ರಿಗಳಿಗೆ ಕಾಣಿಸಿತು - ಶಾಂತಿಗಾಗಿ ಕ್ರಿಕೆಟ್. ಅದೇ ವಾಕ್ಯವನ್ನು ಎರಡು ಮೂರು ಸಲ ಓದಿದಾಗ ಶಾಸ್ತ್ರಿಗಳ ಮಿದುಳು ಚುರುಕಾಯಿತು. ಶಾಂತಿಗಾಗಿ ಕ್ರಿಕೆಟ್ ಆದರೆ ಕ್ರಿಕೆಟ್‌ಗಾಗಿ ಶಾಂತಿ ಏಕೆ ಆಗಬಾರದು.

ತಮ್ಮ ಅತಿ ಮುಖ್ಯ ಕ್ಲಯಂಟ್ ಗೋಪಾಲರಾಯರ ಮನೆಗೆ ಶಾಸ್ತ್ರಿಗಳ ಪ್ರಯಾಣ. ರಾಯರ ಹೆಂಡತಿ ತಂದುಕೊಟ್ಟ ಹಾಲು ಕುಡಿಯುತ್ತಾ 'ನಿಮ್ಮ ರಾಯರ ಜಾತಕ ನೋಡುತ್ತಾ ಇದ್ದೆ. ಮುಂದಿನ ತಿಂಗಳು ಅವರ ನಕ್ಷತ್ರದ ಮೇಲೆ ಕುಜನ ಕೆಟ್ಟ ನೋಟ ಬೀಳುತ್ತದೆ. ಈ ಕಾರ್ತಿಕಕ್ಕೆ ಮುಂಚೆ ಒಂದು ಶಾಂತಿ ನಡೆಸುವಾ' ಎಂದರು. ರಾಯರ ಹೆಂಡತಿಗೆ ಕೆಟ್ಟ ಗ್ರಹವೆಂದರೆ ವಿಪರೀತ ಹೆದರಿಕೆ. ಶಾಂತಿಗೆ ಎಲ್ಲಾ ಸಿದ್ಧ ಮಾಡಿ ಎಂದು ಶಾಸ್ತ್ರಿಗಳಿಗೆ ಹೇಳಿದರು.

ಶಾಸ್ತ್ರಿಯ ಮಗನಿಗೆ ಶಾಂತಿಯಿಂದ ಕ್ರಿಕೆಟ್ ಸೆಟ್ ಸುಲಭವಾಗಿ ಬಂದಿದೆ.

**ದೃಶ್ಯ ನಾಲ್ಕು :** ರಾಜಾಸ್ಥಾನ, ಚಂಡಪ್ರಚಂಡ, ವೈರಿಭಯಂಕರ, ಬಹುಜನ ಹಿತೈಷಿ, ಕುಸುಮ ಹೃದಯಿ, ವಜ್ರಬಾಹು ಇತ್ಯಾದಿ ಬಿರುದಾಂಕಿತ ರಾಜನ ದರ್ಬಾರು, ವಂಧಿ ಮಾಗದರು ತಮ್ಮ ಮಾಮೂಲಿ ಕೆಲಸ ಯಾಂತ್ರಿಕವಾಗಿ ನಡೆಸುತ್ತಿದ್ದಾರೆ. ಆದರೆ ರಾಜನ ತುಷಾರ ಧವಳದ ಮುಖದಲ್ಲಿ ಚಿಂತೆಯ ಕಾರ್ಮೋಡಗಳು. ಈಗ ಎರಡು ವರ್ಷದಲ್ಲಿ ಅಜಾತಶತೃವಾಗಿದ್ದ ರಾಜನಿಗೆ ಈಗ ಎಲ್ಲೆಲ್ಲೂ ಶತೃಗಳೇ ಕಾಣುತ್ತಿದ್ದಾರೆ.

ನಿನ್ನ ಮುಖ ಶುಭ್ರ, ನಿನ್ನ ನಡೆ ಶುಭ್ರ, ನಿನ್ನ ನುಡಿ ಶುಭ್ರ, ನಿನ್ನ ಮನ ಶುಭ್ರ, ನಿನ್ನ ಬಟ್ಟೆ ಶುಭ್ರ, ನಿನ್ನ - ಸರಿ ಎಲ್ಲಾ ಶುಭ್ರ ಎಂದು ಹೇಳುತ್ತಿದ್ದವರೆಲ್ಲಾ ಈಗ ಎಲ್ಲೆಲ್ಲೂ ಕೊಳೆ ತೋರಿಸುತ್ತಿದ್ದಾರೆ. ನೀನು ಮುಖ ತೊಳೆದುಕೊಂಡಿಲ್ಲ, ಬಟ್ಟೆ ಕೊಳೆಯಾಗಿದೆ, ಆ ತರಹದ ಮಾತುಗಳು ನಿನಗೆ ಶೋಭಿಸುವುದಿಲ್ಲ ಎಂದು ಟೀಕಿಸುತ್ತಿದ್ದಾರೆ. ಅದೇಕೆ ಮಾಡಿದೆ? ಇದೇಕೆ ಮಾಡಲಿಲ್ಲ? ಎಂದು ನೂರು ಪ್ರಶ್ನೆಗಳನ್ನು ಕೇಳುತ್ತಿದ್ದಾರೆ.

ರಾಜನಿಗೆ ಹೋದ ವರ್ಷದ ಉಲ್ಲಾಸ ನೌಕಾ ಪ್ರಯಾಣದ ನಂತರ ಒಂದು ದಿನವೂ ನೆಮ್ಮದಿಯಿಲ್ಲ, ಮನಶ್ಯಾಂತಿಯಿಲ್ಲ, ಏನು ಮಾಡಲಿ ಎಂದು ರಾಜ ಯೋಚಿಸುತ್ತಿದ್ದಾಗ ಆಸ್ಥಾನ ಪಂಡಿತರೊಬ್ಬರಿಗೆ ಕಾಣಿಸಿತು ಶಾಂತಿಗಾಗಿ ಕ್ರಿಕೆಟ್ ಘೋಷಣೆ.

ತಕ್ಷಣ ರಾಜಾಜ್ಞೆ ಹೊರಟಿತು. ಭಾರೀ ಭಾರೀ ಕ್ರಿಕೆಟ್ ಪಂದ್ಯಗಳಿಗೆ ಕೋಟಿ ಕೋಟಿ ರೂಪಾಯಿಗಳನ್ನು ಭಂಡಾರದಿಂದ ಬಿಡುಗಡೆ ಮಾಡಲಾಯಿತು. ಈಗ ಜನರಿಗೆಲ್ಲಾ ಕ್ರಿಕೆಟ್‌ದೇ ಸುದ್ದಿ. ರಾಜನ, ಅವನ ಮಂತ್ರಿಗಳ ತಪ್ಪು ನೆಪ್ಪುಗಳನ್ನು ಗಮನಿಸಲು ಜನರಿಗೆ ವೇಳೆಯಿಲ್ಲ, ಕ್ರಿಕೆಟ್‌ನಿಂದ ಶಾಂತಿ ಬಂದಿದೆ - ರಾಜನಿಗೆ ಅವನ ಮಾಂಡಲೀಕರಿಗೆ.

**'ಬೆಸ್ಟ್ ಆಫ್ ಬಾಗೂರು' ಸಂಗ್ರಹದಿಂದ ಆಯ್ಕೆ**



**ಭಾರತೀಯರಿಗೆ ಕ್ರಿಕೆಟ್ ಹುಚ್ಚಂತೆ !!**

# ಕ್ರಿಕೆಟ್ಕ್ವಿಜ್

- ಗೋಪಾಲಾನಂದ

1. ಮಂದಿರಾ ಬೇಡಿ ವ್ಯಾಖ್ಯಾನ ಮಾಡುತ್ತಿದ್ದಾಗ ನಿಮ್ಮ ಗಮನ ಯಾವುದರ ಮೇಲಿರುತ್ತದೆ?
   (1) ಅವಳ ಮುಖದ ಮೇಲೆ (2) ಅವಳ ಮಾತಿನ ಮೇಲೆ
   (3) ಅವಳ ಬ್ಲೌಸನ್ನು ಹಿಡಿದಿಟ್ಟಿರುವ ದಾರದ ಮೇಲೆ
2. ಧೋನಿ ಕುತ್ತಿಗೆ ಮುಚ್ಚುತ್ತಿದ್ದ ತನ್ನ ಕ್ರಾಪ್‌ಗೆ ಕತ್ತರಿ ಹಾಕಿದ್ದು ಯಾವ ವರ್ಷದಲ್ಲಿ?
   (1) 2001 (2) 1999 (3) 2005
3. ಹರಭಜನ್ ಸಿಂಗ್ ಯಾವ ಕಲರ್ ಟರ್ಬನ್ ಧರಿಸಿದ್ದಾಗ ಹೆಚ್ಚು ವಿಕೆಟ್ ಸಿಗುತ್ತದೆ?
   (1) ನೀಲಿ (2) ಕಂದು (3) ಬಿಳಿ
4. ಪಿಚ್ ಉತ್ತರದಿಂದ ದಕ್ಕಿಣಕ್ಕಿದ್ದಾಗ ಭಾರತಕ್ಕೆ ಹೆಚ್ಚು ಸಹಾಯಕಾರಿಯೋ ಪೂರ್ವದಿಂದ ಪಶ್ಚಿಮಕ್ಕೆ ಇರುವಾಗ ಹೆಚ್ಚು ಸಹಾಯಕಾರಿಯೋ?
   (1) ಸೋಮಯಾಜಿಗೆ ಗೊತ್ತು (2) ಬೆಟ್ ಕಟ್ಟುವವರಿಗೆ ಗೊತ್ತು (3) ಯಾರಿಗೂ ತಿಳಿಯದು?
5. ಅಜರುದ್ದೀನ್‌ಗೆ ಯಾವುದರ ಮೇಲೆ ಹೆಚ್ಚು ಆಸಕ್ತಿ ಇತ್ತು?
   (1) ಸಂಗೀತಾ (2) ಹಣ (3) ರನ್
6. 1983ರಲ್ಲಿ ಭಾರತ ಗೆದ್ದ ವಿಶ್ವ ಕಪ್ ಪಂದ್ಯದ ದೃಶ್ಯಾವಳಿಗಳು 2011ರಲ್ಲಿ ಎಷ್ಟು ಬಾರಿ ಕಿರುತೆರೆಯ ಮೇಲೆ ಮೂಡಿ ಬಂದಿದೆ?
   (1) 1983 ಸಲ (2) 2011 ಸಲ (3) ಸ್ಟಿಲ್ ಶೋಯಿಂಗ್ ಆದ್ದರಿಂದ ಎಣಿಕೆ ಮುಗಿದಿಲ್ಲ
7. ಶ್ರೀಶಾಂತ್ ಈ ಬಾರಿ ಒಟ್ಟು ಸಲ ತನ್ನ ಕೈಗಳನ್ನು ಪಿಚ್ ಮೇಲೆ ಬಾರಿಸುತ್ತಾ ತನ್ನ ಕೋಪ / ನಿರಾಶೆ ವ್ಯಕ್ತ ಪಡಿಸುತ್ತಾನೆ?
   (1) 36 (2) 14 (3) 11
8. ಈ ಬಾರಿ ಭಾರತ ಕಪ್ ಗೆದ್ದರೆ ಕ್ರೆಡಿಟ್ ಯಾರಿಗೆ ಸಲ್ಲುತ್ತದೆ?
   (1) ಬೆಟ್ ಕಟ್ಟಿದವರಿಗೆ (2) ಹವನ ಹೋಮ ಮಾಡಿಸಿದವರಿಗೆ (3) ಆಯ್ಕೆ ಸಮಿತಿಗೆ
9. ಭಾರತದ ಆಟಗಾರರರು ಇದರಲ್ಲಿ ಯಾವ ಮಾಲನ್ನು ಇನ್ನೂ ಎಂಡಾರ್ಸ್ ಮಾಡಿಲ್ಲ?
   (1) ಸೀಗೆಪುಡಿ (2) ಬ್ಯಾಡಗಿ ಮೆಣಸಿನಕಾಯಿ (3) ಪುಳಿಯೋಗರೆ ಗೊಜ್ಜು
10. ಈ ಬಾರಿ ಭಾರತ ಕಪ್ ಗೆದ್ದರೆ ಸರ್ಕಾರ ರಜೆ ಘೋಷಿಸಬೇಕೆ?
   (1) ಖಂಡಿತ (2) ರಾಜ್ಯ ಸರ್ಕಾರ ಅಥವಾ ಕೇಂದ್ರ? (3) ರಜೆ ಬದಲು ಒಂದು ದಿನದ ಸಂಬಳ
11. ವಿಶ್ವ ಕಪ್ ಗೆದ್ದರೆ ದೇವೇಗೌಡರ ಮುಖದ ಮೇಲೆ ನಗು ಮೂಡಬಹುದೆ?
   (1) ಖೇನಿಯನ್ನು ಕೇಳಿ (2) ಯಡಿಯೂರಪ್ಪನವರನ್ನು ಕೇಳಿ
   (3) ಅದರಿಂದ ರೈತರಿಗೇನು ಉಪಯೋಗ ಎಂದರೆ?
12. ಭಾರತದಲ್ಲಿ ಎಷ್ಟು ಮಂದಿ ಕ್ರಿಕೆಟ್ ಎಕ್ಸ್‌ಪರ್ಟ್‌ಗಳಿರಬಹುದು?
   (1) 100 ಕೋಟಿ (2) 99 ಕೋಟಿ (3) 120 ಕೋಟಿ
13. ರಜನೀಕಾಂತ್ ಕ್ರಿಕೆಟ್ ಆಡುವ ಹಾಗಿದ್ದರೆ ಯಾವ ಟೀಮಿನಲ್ಲಿ ಇರುತ್ತಿದ್ದ?
   (1) ಅವನೇ ಒಂದು ಟೀಮು (2) ಅವನೇ ಒಂದು ಟೀಮು (3) ಅವನೇ ಒಂದು ಟೀಮು
14. ಈ ಬಾರಿ ಭಾರತ ಕಪ್ ಗೆಲ್ಲದಿದ್ದರೆ ಯಾರು ಹೊಣೆ?
   (1) ಬೆಲೆ ಏರಿಕೆಯಿಂದ ಬಾಧಿತರಾಗಿದ್ದ ಪವಾರ್ (2) ಆಯ್ಕೆ ಸಮಿತಿ (3) ದೇವರು

*ಉತ್ತರ : ಸರಿಯಾದ ಉತ್ತರ ಇರಲೇಬೇಕೆಂದು ಯಾವ ನಿಯಮ ಹೇಳುತ್ತದೆ?*

# ಕ್ರಿಕೆಟ್‌ನ
# ಅಂದ ಕಾಲತ್ತಿನ ಕ್ಷಣಗಳು..

**- ಇ.ಆರ್. ರಾಮಚಂದ್ರನ್**

***ಬೆಂಗಳೂರಿನಿಂದ 200 ಮೈಲಿ ದೂರ ಬಂದು, ಬೆಳಕು ಹರಿಯುವ ಮೊದಲೇ ಸ್ಟೇಡಿಯಮ್‌ಗೆ ಹೋಗಿ, 30,000 ಜನಗಳ ಮಧ್ಯೆ ಕುಳಿತು 200 ಮೀಟರ್ ದೂರದಿಂದ ಹುಳಗಳ ಹಾಗೆ ಕಾಣುವ ಆಟಗಾರರನ್ನು ದುರ್ಬೀನಿನಲ್ಲಿ ನೋಡಿ ಆನಂದ ಪಡುತ್ತಿದ್ದೆವು!***

**ನ**ನಗೆ ಮತ್ತು ನನ್ನ ಅಣ್ಣ ಕೃಷ್ಣನಿಗೆ ಮೊದಲಿನಿಂದಲೂ ಕ್ರಿಕೆಟ್ ಅಂದರೆ ಹುಚ್ಚು. ರಬ್ಬರ್ ಬಾಲ್ ಮತ್ತು ಟೆನ್ನಿಸ್ ಬಾಲ್‌ನ ಗಲ್ಲಿ ಕ್ರಿಕೆಟ್ ಆಡಿ ಗಾಜುಗಳನ್ನು ಒಡೆದು ಚೆನ್ನಾಗಿ ಕಿವಿ ಹಿಂಡಿಸ್ಕೊಂಡಿದೀವಿ.

ಮೊದಲೆಲ್ಲಾ, ಭಾರತಕ್ಕೆ ಬಂದ ಟೀಮ್‌ಗಳು ಬೆಂಗಳೂರಿನ ಸೆಂಟ್ರಲ್ ಕಾಲೇಜು ಮೈದಾನದಲ್ಲಿ ದಕ್ಷಿಣ ವಲಯದ ಟೀಮಿನ ವಿರುದ್ಧ ಮೂರು ದಿನದ ಪಂದ್ಯವಾಡಿ, ಮದರಾಸಿನ ಚೆಪಾಕ್ ಮೈದಾನದಲ್ಲಿ ಟೆಸ್ಟ್ ಆಡುವುದು ಒಂದು ವಾಡಿಕೆ. ಮದ್ರಾಸಿನ ಪಂದ್ಯ ಯಾವಾಗಲೂ ಪೊಂಗಲ್ ಸಮಯದಲ್ಲಿ ಬರೋದು. ಐದು ದಿವಸ ಪಂದ್ಯಕ್ಕೆ ಸರಿಯಾಗಿ ಐದು ದಿವಸ ಹಬ್ಬಗಳು : ಭೋಗಿ, ಮಾಟ್ಟು ಪೊಂಗಲ್, ಕನು ಪೊಂಗಲ್ ಇತ್ಯಾದಿ.

ನಮ್ಮ ದೊಡ್ಡಪ್ಪನ ಮಕ್ಕಳು ಮದರಾಸಿನಲ್ಲಿ (ಈಗ ಚೆನ್ನೈ) ಕೆಲಸ ಮಾಡುತ್ತಿದ್ದರು; ಅವರ ರೊಟೀನ್ ದಿನಾ ಕೆಲಸವಾದ ಮೇಲೆ ಕ್ರಿಕೆಟ್ ಪ್ರಾಕ್ಟಿಸ್. ಮದ್ರಾಸಿನಲ್ಲಿ ಸುಮ್ಮನೆ ಕೂತಿದ್ದರೇನೇ ಐದೈದು ನಿಮಿಷಕ್ಕೆ ಒಂದು ಕೊಡ ಬೆವರು ಸುರಿಯುತ್ತೆ! ಓಡಾಡುವಾಗ ತಲೆ ಮೇಲೆ ಯಾವಾಗಲೂ ಒಂದು ಫ್ಯಾನ್ ಇದ್ದರೆ ಎಷ್ಟು ಚೆನ್ನಾಗಿರುತ್ತೆ ಅಂತ ಅನ್ನಿಸುತ್ತೆ ಅಲ್ಲಿಗೆ ಹೋದಾಗೆಲ್ಲ. ಹೀಗಿರುವಾಗ ಅಲ್ಲಿ ಹೇಗೆ ಕ್ರಿಕೆಟ್ ಆಡುತ್ತಾರೋ ದೇವರೇ ಬಲ್ಲ.

ಆವಾಗಲೆಲ್ಲಾ ಬೆಂಗಳೂರಿನಿಂದ ಟೀಮ್‌ಗಳು ರಾತ್ರಿ ಮೈಲ್ ಟ್ರೈನ್ನಲ್ಲಿ ಮದ್ರಾಸಿಗೆ ತೆರಳುತ್ತಿದ್ದರು. ವಿಮಾನದ ಪ್ರಯಾಣ ಬಹಳ ವಿರಳ. 'ಡಕೋಟದಲ್ಲಿ' ವಿಮಾನ ಪ್ರಯಾಣ ಅಂತ ಕೇಳಿದರೇನೇ ಬಹಳಷ್ಟು ಜನ ಹೆದರಿ ಸಾಯುತ್ತಿದ್ದರು! ವಿಮಾನದಲ್ಲಿ ಮೇಲೆ ಹೋದವರು ಮುಕ್ಕಾಲು ಜನ ಹಾಗೇ ಸೀದಾ ಮೇಲೆ ಹೊರಟೋಗ್ತಾರೆ, ಕೆಳಗೆ ಸಿಗೋದು ಬರೀ ಬೂದೀನೇ ಅಂತ ಕೆಟ್ಟನಂಬಿಕೆ ಬೇರೆ!

ನಮ್ಮ ದೊಡ್ಡಪ್ಪನ ಮಕ್ಕಳು ನಮಗೂ ಟಿಕೆಟ್ ಖರೀದಿಸುತ್ತಿದ್ದರು.

ಆಗೆಲ್ಲಾ ಸ್ಟೇಡಿಯಮ್ನಲ್ಲಿ ಸೀಟಿಗೆ ರಿಸರ್ವೇಷನ್ ಇರಲಿಲ್ಲ. ಒಳ್ಳೆ ಜಾಗ ಸಿಗಬೇಕೆಂದರೆ ರಾತ್ರಿಯೇ ಹೋಗಿ ಸ್ಟೇಡಿಯಮ್ ಗೇಟಿನ ಮುಂದೆ ಮಲಗಬೇಕು! ಬೆಳಿಗ್ಗೆ ಗೇಟ್ ತೆಗೆದಾಗ ಓಡಿ ವಿಕೆಟ್ ಕೀಪರ್ ಹಿಂದೆ ಇಲ್ಲ ಬೋಲರ್ ಹಿಂದೆ ಕಾಣುವ ಜಾಗದಲ್ಲಿ ಸೀಟ್ ಹಿಡಿಯುತ್ತಿದ್ದರು. ಬಸ್ಸಿನಲ್ಲಿ ಜಾಗ ಹಿಡಿಯುವ ಹಾಗೆ ಟವಲ್ಗಳು, ಜಮಖಾನ, ಹಿಂದು ಪೇಪರ್ ಹಾಕಿ 'ರಿಸರ್ವ್' ಮಾಡುತ್ತಿದ್ದರು.

ಅಷ್ಟು ಹೊತ್ತಿಗೆ ಇನ್ನೊಂದು ತಂಡ ಕಾಫಿ ತಂದು ಅವರನ್ನು ರಿಲೀವ್ ಮಾಡುತ್ತಿದ್ದರು. ಅವರೆಲ್ಲರ ಮನೆಯಲ್ಲಿ ಬೆಳಗಿನ ಜಾವವೇ ಹಬ್ಬದ ಅಡುಗೆ ಮಾಡಲು ಶುರುವಾಗುತ್ತಿತ್ತು.

ಸುಮಾರು 10 ಘಂಟೆಗೆ, ಅಂಪೈರ್ಗಳು ಬರುವ ಹೊತ್ತಿಗೆ ರಾತ್ರಿ ಸ್ಟೇಡಿಯಮ್ ಡ್ಯೂಟಿ ಮಾಡಿ ಬೆಳಿಗ್ಗೆ ಹೋದವರು ಸ್ನಾನ ಮುಗಿಸಿ, ಮನೆಯ ಹೆಂಗಸರು, ಮಕ್ಕಳನ್ನು ಎಲ್ಲಾ ಕರೆದುಕೊಂಡು ಹಬ್ಬದ ಊಟದ ಕ್ಯಾರಿಯರ್ ಜೊತೆಗೆ ಬರುತ್ತಿದ್ದರು.

ಎರಡು ಮ್ಯಾಚ್‌ಗಳೂ ಒಟ್ಟಿಗೆ ಶುರು.

ಆಟ ಶುರುವಾಗಿ ಒಂದು ಘಂಟೆಯಾಗಿ, ಮೈದಾನಕ್ಕೆ 'ಡ್ರಿಂಕ್ಸ್ ' ಬಂದಾಗ, ನಮ್ಮ ತಂಡಕ್ಕೆ ಮಸಾಲ್ ವಡೆ, ಶಂಕರ್ ಪೋಳಿ ಜೊತೆಗೆ ಫಿಲ್ಟರ್ ಕಾಫಿ ಸರಬರಾಜು! ಹೀಗೆ ಪ್ರತಿ ಬ್ರೇಕ್‌ಗೂ ವಿಧ ವಿಧವಾದ ತಿಂಡಿಗಳು ಪ್ರತ್ಯಕ್ಷವಾಗುವುದು.

12.30ಕ್ಕೆ ಆಟದಲ್ಲಿ 'ದಟ್ಸ್ ಲಂಚ್ ಜಂಟಲ್‌ಮೆನ್' ಅಂತ ಅಂಪೈರ್ 'ದೋಗ' ರಘುನಾಥ ರಾವ್ ಘೋಷಿಸಿದಾಗ, ಇಲ್ಲಿ ನಮ್ಮ ಊಟ ಶುರು! ಸ್ವೀಟ್ ಪೊಂಗಲ್, ಖಾರದ ಪೊಂಗಲ್, ಆಲೂಗಡ್ಡೆ ಪಲ್ಯ, ಚಿಪ್ಸ್, ಆಮೇಲೆ ಮೊಸರನ್ನ, ಜೊತೆಗೆ ಮಾವಿನಕಾಯಿ ಉಪ್ಪಿನಕಾಯಿ.

ಇದೆಲ್ಲಾ ಮುಗಿಸುವ ಹೊತ್ತಿಗೆ ಅಂಪೈರ್ ಸತ್ಯಾಜಿ ರಾವ್ ಅವರ ಜಾಗಕ್ಕೆ ಬಂದು 'ಪ್ಲೇ' ಅಂತ ಕೂಗುವರು.

ಮಧ್ಯಾಹ್ನ ಟೀ ಬ್ರೇಕ್‌ಗೆ, ನಮ್ಮ ಪೆವಿಲಿಯನ್‌ನಲ್ಲಿ ಕಾಫಿ ಜೊತೆ ಚಕ್ಕಲಿ, ಮುಚ್ಚೋರೆ..

ಕನು ಪೊಂಗಲ್ ದಿವಸದೂಟ ನಿಂಬೇಹಣ್ಣಿನ ಚಿತ್ರಾನ್ನ, ತೆಂಗಿನಕಾಯಿ ಚಿತ್ರಾನ್ನ, ಕೇಸರಿ ಭಾತ್, ಮೊಸರನ್ನ, ಸಂಡಿಗೆ...

ಹೀಗೆ ಐದು ದಿನವೂ ಹಬ್ಬದ ಊಟ ಮತ್ತು ಕ್ರಿಕೆಟ್ ಹಬ್ಬ.

ಮಧ್ಯೆ ಜಯಸಿಂಹ ಸಿಕ್ಸರ್ ಹೊಡೆದರೆ, ಸಲೀಂ ದುರಾನಿ ವಿಕೆಟ್ ತೊಗೊಂಡರೆ ಸಣ್ಣ ಸೆಲೆಬ್ರೇಷನ್! ರವಾ ಲಾಡು ಸ್ಟೀಲ್ ಡಬ್ಬದಿಂದ ಬರುತ್ತಿತ್ತು!

ಆವಾಗಲೆಲ್ಲಾ ಟೆಸ್ಟ್ ಮ್ಯಾಚ್ ಮಧ್ಯೆ ಒಂದು ದಿವಸ 'ರೆಸ್ಟ್ ಡೇ' ಅಂತ ಇಟ್ಟಿದ್ದರು.

ಆ ದಿವಸ ಯಾರಾದರೂ ಹೆಸರಾಂತ ಇಂಡಸ್ಟ್ರಿಯಲಿಸ್ಟ್ ಆಟಗಾರರನ್ನು ಅವರ ಮನೆಯಲ್ಲಿ ಭೋಜನ ಕೂಟಕ್ಕೆ ಕರೆಯುತ್ತಿದ್ದರು.

ಒಂದು ಸಲ ನಾವು 'ರೆಸ್ಟ್ ಡೇ' ದಿವಸ ಆರಾಮವಾಗಿ ಎದ್ದು ಮನೆಯಲ್ಲಿ ಎಲ್ಲರ ಜೊತೆ ಮಾತನಾಡುತ್ತಿದ್ದಾಗ, ಪಕ್ಕದ ಮನೆಯಿಂದ ಜೋರಾಗಿ ಕೇಕೆ ಹಾಕಿದ ನಗು ಕೇಳಿ ಬಂತು. ಮತ್ತೆ ಮತ್ತೆ ಶಬ್ದ ಕೇಳಿ ಬಂದಾಗ, 'ಯಾಕೆ ಇವತ್ತು ಇವರ ಮನೆಯಲ್ಲಿ ಇಷ್ಟು ಶಬ್ದ, ಏನು ವಿಶೇಷವೊ?' ಅಂದರು ನಮ್ಮ ಸೋದರತ್ತೆ.

ಆಗ ಅಲ್ಲೇ ಇದ್ದ ನಮ್ಮ ಸೋದರ ಮಾವ, 'ಈ ಮೆಹ್ತಾಗೆ ಬೇರೆ ಏನು ಕೆಲಸ? ದಿನ ಬೆಳಗಾದರೆ ಪಾರ್ಟಿ! ಇಂಡಿಯನ್ ಟೀಮಿನ ಎಲ್ಲಾ ಆಟಗಾರರನ್ನು ಊಟಕ್ಕೆ ಕರೆದಿದ್ದಾನೆ,

ಭೂಪ!' ಈ ನಮ್ಮ ಸೋದರ ಮಾವನಿಗೂ ಕ್ರಿಕೆಟ್‌ಗೂ ಯಡಿಯೂರಪ್ಪ ಅನಂತಕುಮಾರ್ ಮಧ್ಯೆ ಇರುವಷ್ಟು ಒಲವು ಮಾತ್ರ ಇತ್ತು.

ಸೋದರಮಾವನ ಪಕ್ಕದ ಮನೆಯಾತ ಸುದೀಪ್ ಮೆಹ್ತಾ ಉದ್ಯೋಗಪತಿಯಾಗಿದ್ದರು.

ಇವರ ಆಟ ನೋಡುವುದಕ್ಕೆ ನಾವು ಬೆಂಗಳೂರಿನಿಂದ ಇನ್ನೂರು ಮೈಲಿ ದೂರ ಬಂದು, ದಿನಾ ಬೆಳಕು ಹರಿಯುವ ಮೊದಲೇ ಸ್ಟೇಡಿಯಮ್‌ಗೆ ಹೋಗಿ, ಮೂವತ್ತು ಸಾವಿರ ಜನಗಳ ಮಧ್ಯದಿಂದ ಇನ್ನೂರು ಮೀಟರ್ ದೂರದಿಂದ ಹುಳಗಳಹಾಗೆ ಕಾಣುವ ಪ್ಲೇಯರ್ಸ್‌ನ್ನ ಬೈನಾಕ್ಲರ್ಸ್‌ನಲ್ಲಿ ನೋಡಿ ಆನಂದ ಪಡ್ತಿದ್ವಿ ! ಅವರೆಲ್ಲಾ ಈಗ ಪಕ್ಕದ ಮನೆಯಲ್ಲಿ ಊಟಕ್ಕೆ ಬಂದಿದ್ದಾರೆ.... ಚಂದು ಬೋರ್ಡೆ, ಬಾಪು ನಾಡಕರ್ಣಿ, ಜಯಸಿಂಹ, ಪಟೌಡಿ, ಸರ್ದೇಸಾಯಿ, ಸಲೀಂ ದುರಾನಿ......

ನಾನು ಮತ್ತು ಕೃಷ್ಣ ನಾಗಾಲೋಟದಲ್ಲಿ ಅವರ ಮನೆ ಕಡೆ ಓಡಿದೆವು!


ನಾವು ಹೋದಾಗ ಒಂದೆರೆಡು ಕಾರಿನಲ್ಲಿ ಸುಮಾರು ಜನ ಹೋಗುತ್ತಿದ್ದರು... ಅವರನ್ನು ಬೀಳ್ಕೊಡುತ್ತಾ ಇದ್ರು ಮೆಹ್ತಾ. ಇನ್ನೂ ಚಂದು ಬೋರ್ಡೆ, ನಾಡಕರ್ಣಿ, ಜಾಸು ಪಟೇಲ್ ಅಲ್ಲೇ ಇದ್ದರು. ನಾವು ಓಡಿ ಅವರ ಕೈಗಳನ್ನು ಬಲವಾಗಿ ಕುಲುಕುತ್ತಿದ್ದಾಗ, ನಮ್ಮ ಹಿಂದೆಯೇ ಬಂದ ಸೋದರಮಾವನನ್ನು ನೋಡಿ, 'ಅರೆ ಸ್ವಾಮಿ! ಬೆಂಗಳೂರಿನಿಂದ ಟೆಸ್ಟ್ ಮ್ಯಾಚ್ ನೋಡುವುದಕ್ಕೆ ನಿಮ್ಮ ಮನೆಗೆ ಗೆಸ್ಟ್ ಬಂದೀದಾರೇಂತ ನನಗೆ ಗೊತ್ತಿರಲಿಲ್ಲ, ಗೊತ್ತಿದ್ದರೆ ಇವರನ್ನೂ ಪ್ಲೇಯರ್ಸ್ ಜೊತೆ ಊಟಕ್ಕೆ ಕರೀತಿದ್ದೆ' ಎಂದರು!

ಸ್ವರ್ಗ ಪಕ್ಕದಲ್ಲೇ ಇದ್ದು ಕೈಗೆ ಸಿಕ್ಕದೇ ಹೋಯಿತು!

ಮೆಹ್ತಾನೇ ನಮ್ಮನ್ನು ಪ್ಲೇಯರ್ಸ್ ಮಧ್ಯ ನಿಲ್ಲಿಸಿ ಫೋಟೊ ತೆಗೆದರು. ಆಟೋಗ್ರಾಫ್ ಕೂಡಾ ಕೊಡಿಸಿದರು.

ಜಾಸು ಪಟೇಲ್ ಮತ್ತು ನನ್ನ ಅಣ್ಣ ಕೃಷ್ಣ ಇಬ್ಬರೂ ಈಗ ಇಲ್ಲ.

ಬೋರ್ಡೆ, ನಾಡಕರ್ಣಿ, ಜಾಸು ಪಟೇಲ್‌ರ ಜೊತೆ ತೆಗಿಸಿಕೊಂಡ ಪಿಕ್ಚರ್ ಈಗಲೂ ಇದೆ.







Since 1998
**Whisper Hearing Aids**
Pvt. Ltd.
1030/13, 25 main, 39 cross,
4th 'T' block, Jayanagara, Bengaluru

SIEMENS
Authorised Hearing Care Centre

Avail **FREE** supply of batteries for a year on purchase of hearing aids for this week.
10am - 1:30pm, 5pm - 8pm
Appointment : 26640571, 9741765454


ಕಿವಿ - ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.

**ಡಾ|| ಜಿ. ಪುರುಷೋತ್ತಮ** ಇಡಿ.ಡಿ.
**ವಾಕ್ - ಶ್ರವಣದೋಷ ತಜ್ಞ, ವಿಸ್ಪರ್ ವಾಕ್ - ಶ್ರವಣ ಕೇಂದ್ರ**

# ಬಾಳು ಬಾಲಾಯಿತು

**- ವಿನಾಯಕ**

***ನನ್ ಬಾಳು ಒಂಥರಾ ಕ್ರಿಕೆಟ್ ಬಾಲ್ ಥರಾನೇ ಆಗೋಯಿತು. ಯಾರು ಗೆಲ್ತಾರೋ, ಯಾರು ಸೋಲ್ತಾರೋ ನಾನಂತೂ ಹೊಡೆಸಿಕೊಳ್ಳೋದೇ ಆಗೋಯಿತು.***

**ನ**ನಗೂ ಕ್ರಿಕೆಟ್‌ಗೂ ಸಂಬಂಧ ಅಷ್ಟಕ್ಕಷ್ಟೆ. ಎಷ್ಟೋ ಸಲ ಈ ಮ್ಯಾಚ್ ನೋಡಲೇಬೇಕು ಅಂತ ಆಫೀಸಿಗೆ ರಜೆ ಹಾಕಿ ಕೂತದ್ದಿದೆ. ಉಹುಂ, ಕಾಲು ಗಂಟೆ ಕಳೆದ ಕೂಡಲೇ ಬೋರನ್ನಿಸಿಬಿಟ್ಟು, ಇದಕ್ಕಿಂತ ಆ ಆಫೀಸೇ ಬೆಸ್ಟ್ ಅಂತ ಅನ್ನಿಸಿದ್ದೂ ಇದೆ. ಕ್ರಿಕೆಟ್ ಹುಚ್ಚು ಬೆಳೆಸಿಕೊಂಡು ನಾನೂ ಮನುಷ್ಯನಾಗಬೇಕು ಅಂತ ಮಾಡಿದ ಪ್ರಯತ್ನಗಳೆಲ್ಲ ವಿಫಲವಾಗಿದೆ. ಕಡೆಗೂ ನಾನು ಒಪ್ಪಿ ಕೊಂಡುಬಿಟ್ಟಿದ್ದೇನೆ- ನನಗೂ ಕ್ರಿಕೆಟ್‌ಗೂ ಆಗಿಬರೊಲ್ಲ ಅಂತ.

ನಮ್ಮ ಮನೆಯಲ್ಲಿ ನನ್ನನ್ನು ಬಿಟ್ಟರೆ ಎಲ್ಲರಿಗೂ ಕ್ರಿಕೆಟ್ಟೇ ದೇವರು. ನನ್ನಾಕೆಗೋ ಕ್ರಿಕೆಟ್ ಎಂದರೆ ಮುಗೀತು. ಹೊಸ ಆಟಗಾರರಿಂದ ಹಿಡಿದು 70ರ ದಶಕದ ಆಟಗಾರರವರೆಗೂ ಎಲ್ಲರ ಹೆಸರು, ಅವರು ಮಾಡಿದ ಸ್ಕೋರ್, ಯಾವ ಮ್ಯಾಚ್‌ನಲ್ಲಿ ಯಾರು ಕ್ಯಾಚ್ ಹಿಡಿದರು, ಯಾರು ಬಿಟ್ಟಿದ್ದರಿಂದ ಯಾರು ಸೋತರು, ಯಾವ ಸ್ಪಿನ್ನಿಗೆ ಯಾವ ಶಾಟ್ ಬೇಕು- ಹೀಗೆ ಎಲ್ಲವೂ ಕರಾತಲಮಲಕ. ನಂಗೆ ಅದೆಲ್ಲ ಬೇಜಾರಾಗೊಲ್ಲ. ಆದರೆ ನಾನು ಆಫೀಸಿನಿಂದ ಸುಸ್ತಾಗಿ ಮನೆಗೆ ಬಂದು ಬೆನ್ನು ನೋವು ಅಂತ ಮಲಗಿಕೊಂಡರೆ, ರೀ ಪಾಪ ಸಚಿನ್‌ಗೆ ಭುಜ ನೋವಂತೆ, ಅಫ್ರಿದಿಗೆ ಸೊಂಟ ನೋವಂತೆ ಕಣ್ರೀ ಅಂತಂದುಬಿಡುತ್ತಾಳೆ. ಯಾವ ಗಂಡಸು ತಾನೇ ಇಂಥದ್ದನ್ನು ಸಹಿಸಿಕೊಳ್ಳುತ್ತಾನೆ ಹೇಳಿ?

ವರ್ಲ್ಡ್‌ಕಪ್ ಆರಂಭವಾಯಿತೆಂದರೆ ನಮ್ಮ ಮನೇಲಿ ಸ್ಟೌ, ಕುಕ್ಕರ್‌ಗಳಿಗೆಲ್ಲ ಖುಷಿ. ಒಂದ್ಸಲ ಹೀಗೆ ಆಯಿತು. ಲಾಸ್ಟ್ ವರ್ಲ್ಡ್ ಕಪ್‌ನಲ್ಲಿ ಡೇ ಅಂಡ್ ನೈಟ್ ಮ್ಯಾಚ್ ಮರುದಿನ ಬೆಳಿಗ್ಗೆ ನಾನು ಎಂದಿನಂತೆ ಏಳು ಗಂಟೆಗೆ ಎದ್ದೆ. ನನ್ನ ಇನ್‌ಬಾಕ್ಸ್‌ನಲ್ಲಿ ಒಂದು ಮೆಸೇಜ್ ಬಂದಿತ್ತು. ''ರಾತ್ರಿ ಮಲಗುವಾಗ ತಡವಾಗಿದೆ. ಅಡುಗೆ ಮನೇಲಿ ಪೆಪ್ಸಿನೂ, ಕುರುಕುರೆನೂ ಇಟ್ಟಿದ್ದೇನೆ. ಬ್ರೇಕ್ ಫಾಸ್ಟ್ ಮಾಡಿಕೊಂಡು ಆಫೀಸಿಗೆ ಹೋಗಿ. ಡೋಂಟ್ ಡಿಸ್ಟರ್ಬ್, ಗುಡ್‌ನೈಟ್'' ಅಂತ. ಕ್ರಿಕೆಟ್ ಮಾತ್ರ ಅಲ್ಲ, ಈ ಜಾಹೀರಾತುಗಳೂ ನನ್ನ ಲೈಫನ್ನ ಹಾಳು ಮಾಡ್ತಾ ಇದೆ ಅಂತ ಅರ್ಥ ಆಗಿದ್ದು ನನಗೆ ಅವತ್ತೇ.

ನಾನು ಮದುವೆಯಾಗಿದ್ದು ವರ್ಲ್ಡ್‌ಕಪ್ ಮುಗಿದ ನಂತರದ ತಿಂಗಳು. ಹಾಗಾಗಿ ಮತ್ತೆ ನಾಲ್ಕು ವರ್ಷ ಸಮಸ್ಯೆ ಇರಲಿಲ್ಲ. ಸಂಸಾರಕ್ಕೇನೂ ತೊಂದರೆಯಾಗಿಲ್ಲ. ಇಬ್ಬರು ಮಕ್ಕಳು. ಒಂದು ಗಂಡು, ಒಂದು ಹೆಣ್ಣು. ಇಬ್ಬರೂ ಕ್ರಿಕೆಟ್ ವಿಷಯದಲ್ಲಿ ಅಮ್ಮನ ಕಡೆಯವರೇ.

ನಾನಾಕೆಯ ಕ್ರಿಕೆಟ್ ಪ್ರೀತಿ ಬಗ್ಗೆ ಹೆಚ್ಚು ವಿರೋಧ ವ್ಯಕ್ತಪಡಿಸುವುದಿಲ್ಲ. ಏನೋ ಅಭಿಮಾನ ಎಂದು ಸುಮ್ಮನಾಗಿಬಿಡುತ್ತೇನೆ. ಆದರೆ ರಾತ್ರಿ ಮ್ಯಾಚ್ ನೋಡಿ ಬೆಳಿಗ್ಗೆ ಎದ್ದು

ಧೋನಿದ್ದು ಏನು ಆಟ ಕಣ್ರೀ ಅಂತಾಳಲ್ಲ, ಆಗ ಮನಸ್ಸಿಗೆ ತುಂಬಾ ಕುರ್‌ಕುರೆಯಾಗ್ತದೆ. ಒಮ್ಮೊಮ್ಮೆ ವಿನಾಕಾರಣ ನನ್ನನ್ನು ಕ್ರಿಕೆಟಿಗರಿಗೆ ಹೋಲಿಸುವಾಗಲಂತೂ ಮೈ ಉರಿದುಬಿಡುತ್ತದೆ. ''ಅದ್ಯಾಕ್ರೀ ಶ್ರೀಶಾಂತ್ ಥರ ಸಿಡುಕುತ್ತೀರಿ, ಸಚಿನ್ ಥರ ಉಗುರು ಕಚ್ಕೊತ್ತೀರಿ..'' ಹೀಗೆ ನನ್ನನ್ನು ಅವರಿಗೆಲ್ಲ ಹೋಲಿಸಿಬಿಟ್ಟಾಗ ಶಾಂತವಾಗಿ ಹೇಳ್ತೀನಿ– ''ನೋಡು ಕಣೇ, ಹಾಗೆಲ್ಲ ಕಂಪೇರ್ ಮಾಡಬೇಡ. ನಾನು ನಾನೇ'' ಅಂತ. ತಕ್ಷಣ ಬ್ಯಾಟ್ ಮಾಡುತ್ತಾಳೆ– ''ಅಬ್ಬಾ, ಈಗ ದ್ರಾವಿಡ್ ಥರ ಕಾಣಿಸ್ತಾ ಇದ್ದೀರಿ, ಎಷ್ಟು ಕೂಲ್..'' ಅಂತ!

ಎಷ್ಟೋ ಸಲ ರಾತ್ರಿ ಊಟಕ್ಕೂ ತತ್ವಾರ. ಏನೋ ಪಾಪ ಮ್ಯಾಚ್ ನೋಡ್ತಾ ಇದ್ದಾಳೆ ಅಂತ ಅಡುಗೆ ಮಾಡೋಕೆ ಹೋದ್ರೆ ಅಲ್ಲೂ ಎಡವಟ್ಟು, ಬೇಳೆಯೋ, ಉಪ್ಪೋ ಇರುವುದೇ ಇಲ್ಲ, ಆಕೆಯ ಕ್ರಿಕೆಟ್ ಸಹವಾಸ– ನಮಗೆಲ್ಲ ಉಪವಾಸ ಎಷ್ಟೋ ದಿನ. ಕೇಳಿದ್ರೆ, ಕ್ರಿಕೆಟ್ ಎನ್ನೋದು ಧರ್ಮ; ವರ್ಲ್ಡ್‌ಕಪ್ ಎನ್ನೋದು ವ್ರತ ಎಂದು ಏನೇನೋ ಬಡಬಡಿಸುತ್ತಿದ್ದಳು.

ನನ್ ಬಾಳು ಒಂಥರಾ ಕ್ರಿಕೆಟ್ ಬಾಲ್ ಥರಾನೇ ಆಗೋಯಿತು. ಯಾರು ಗೆಲ್ತಾರೋ, ಯಾರು ಸೋಲ್ತಾರೋ ನಾನಂತೂ ಹೊಡೆಸಿಕೊಳ್ಳೋದೇ ಆಗೋಯಿತು.

ಇವಳ ಕ್ರಿಕೆಟ್ ಹುಚ್ಚು ಅತಿರೇಕಕ್ಕೆ ಹೋಗುತ್ತಿರುವುದನ್ನು ನೋಡಿ ಯಾವುದಾದರೂ ಸೈಕ್ರಿಯಾಟಿಸ್ಟ್ ಹತ್ತಿರ ಕರೆದುಕೊಂಡು ಹೋಗಬೇಕು ಎಂದು ತೀರ್ಮಾನಿಸಿದೆ. ಹಗಲು ರಾತ್ರಿ ಕ್ರಿಕೆಟ್ ಧ್ಯಾನ ನಿಲ್ಲಿಸದಿದ್ದರೆ ಮುಂದೆ ಅಪಾಯ ಇದೆ ಎಂದು ನನಗೆ ಗೊತ್ತಾಯಿತು. ಫೇಮಸ್ಸು ಡಾಕ್ಟ್ರು ನಳಿನಿ ಬಳಿ ಒಮ್ಮೆ ಕರೆದುಕೊಂಡು ಹೋದೆ. ಥರೋ ಪರೀಕ್ಷೆ ಮಾಡಿ, ಪ್ರಾಬ್ಲಂ ಏನೂ ಇಲ್ಲ. ಸುಮ್ಮನಿದ್ದು ಬಿಡಿ ಎಂದು ಸಲಹೆ ಕೊಟ್ಟರು. ನನ್ನ ಕಷ್ಟ ಅವರಿಗೆ ಎಲ್ಲಿ ಅರ್ಥವಾಗಬೇಕು? ಅವರು ಗಂಡಸ್ಸಾಗಿದ್ದು, ಇಂಥ ಹೆಂಡತಿ ಇದ್ರೆ ಗೊತ್ತಾಗ್ತಾ ಇತ್ತೇನೋ?

ಮೊದ ಮೊದಲು ಮಕ್ಕಳ ಜತೆ, ಪಕ್ಕದ ಮನೆ ರೀನಾ ಜತೆ ಕ್ರಿಕೆಟ್ ಬಗ್ಗೆ ಚರ್ಚೆ ಮಾಡುತ್ತಿದ್ದ ಈಕೆ ಈಗ ಫೋನಿನಲ್ಲೂ ಸ್ನೇಹಿತರ ಜತೆ ಕ್ರಿಕೆಟ್ ಬಗ್ಗೆ ಮಾತಾಡಲು ಶುರು ಮಾಡಿದಳು. ಒಂದು ದಿನ ಅರ್ಧಗಂಟೆಯಾದರೂ ಫೋನ್ ಇಟ್ಟಿರಲಿಲ್ಲ, ಬರೇ ಇದೇ ಡಿಸ್ಕಷನ್... ಏನು ಶಾಟ್ ಅದು, ಅವನ ಸ್ಕ್ವೇರ್ ಕಟ್ ಸೂಪರ್ ಆಗಿತ್ತು. ಈ ಸ್ಕೋರ್‌ನ ಚೇಸ್ ಮಾಡ್ಲಿಲ್ಲ ಅಂದ್ರೆ ಇನ್ನ್ಯಾಕ್ರೀ ಆಡಬೇಕು.. ಹೀಗೆ ಆಕ್ರೋಶಭರಿತ ಮಾತುಗಳು. ಫೋನಿಟ್ಟ ಮೇಲೆ ಕೇಳ್ದೆ– ಯಾರ ಜತೆಗೆ ಇಷ್ಟೊತ್ತು ಕ್ರಿಕೆಟ್ ಆಡ್ತಾ ಇದ್ದೆ ಅಂತ. ''ಅದೇ ಕಣ್ರೀ ಅವತ್ತು ಕರ್ಕೊಂಡು ಹೋಗಿದ್ರಲ್ಲ, ಸೈಕ್ರಿಯಾಟಿಸ್ಟ್ ಡಾ. ನಳಿನಿ'' ಅಂತ ಹೇಳಿದಾಗ ನಾನು ಇಂಡಿಯಾದ ಪಿಚ್ಚಾಗಿಬಿಟ್ಟೆ!

ಬಹುಶಃ ನನ್ನ ಹಾಗೆಯೇ ಎಷ್ಟು ಜನ ಹೀಗೆ ಒದ್ದಾಡುತ್ತಿರಬಹುದೋ ಎಂದು ನನಗೆ ಆಗಾಗ್ಗೆ ಕಾಡುತ್ತಿತ್ತು. ಈ ಬಗ್ಗೆ ಸಾಕಷ್ಟು ಸಲ ಗಂಭೀರವಾಗಿ (ಗೌತಮ್ ಗಂಭೀರವಾಗಿ ಅಲ್ಲ) ಯೋಚನೆ ಮಾಡಿದ್ದೆ. ಕ್ರಿಕೆಟ್‌ಪೀಡಕರ ಸಂಘವೊಂದನ್ನು ಕಟ್ಟುವ ಬಗ್ಗೆಯೂ ಯೋಚನೆ ಮಾಡಿದ್ದೆ. ಈ ಐಡಿಯಾವನ್ನು ನನ್ನ ಮಿತ್ರನೊಬ್ಬನಿಗೆ ಹೇಳಿದೆ.

ಅವನಿಗೋ ಆಶ್ಚರ್ಯ! ''ಅಲ್ಲ ಕಣಪ್ಪ, ಯಾವಾಗಲೂ ಡಕ್‌ಗೆ ಔಟ್ ಆಗೋನು

ಸೆಂಚುರಿ ಬಾರಿಸಿದಂಗಾಯ್ತಲ್ಲೋ, ನಿನಗೂ ಐಡಿಯಾ ಬಂದಿದೆ'' ಅಂತ ಕುಟುಕಿದ. ಅದೆಲ್ಲ ಇರಲಿ, ಸಂಘ ಆರಂಭಿಸೋದ ಅಂತ ನೇರವಾಗಿ ಕೇಳ್ದೆ.

''ನೋಡು, ಅದೆಲ್ಲ ಓಕೆ. ಸಂಘ ಸ್ಥಾಪಿಸಿ ನಿಮ್ಮ ಹಿತಾಸಕ್ತಿ ಬಗ್ಗೆ ಹೋರಾಡೋದು ಎಲ್ಲ ಗುಡ್ ಐಡಿಯಾನೇ. ಆದರೆ ಒಂದು ಎಡವಟ್ಟು ಆಗಬೋದು. ನೋಡು, ಸಾಮಾನ್ಯವಾಗಿ ಕ್ರಿಕೆಟ್‌ನ್ನು ಇಷ್ಟಪಡದ ಗಂಡಸರು ಭಾಳ ಕಡಿಮೆ. ಹೀಗಾಗಿ, ನಿನಗೆ ಏನೋ ಐಬಿದೆ ಅಂತ ಜನ ತಿಳ್ಕೊಂಡ್ರೆ''- ಎಂದು ನೇರವಾಗಿ ನನ್ನ ಪೌರುಷಕ್ಕೇ ಸವಾಲು ಹಾಕಿದ. ಮತ್ತೊಮ್ಮೆ ಪಿಚ್ಚಾಗಿಬಿಟ್ಟೆ!

ಕ್ರಿಕೆಟ್ ವಿರುದ್ಧ ಆಡೋದಕ್ಕಿಂತ ಅಡ್ಜಸ್ಟ್ ಆಗಿಬಿಡೋದೇ ವಾಸಿ ಅಂತ ತೀರ್ಮಾನಕ್ಕೆ ಬಂದುಬಿಟ್ಟೆ.

ಇನ್ನೊಂದು ಸಲ, ನನ್ನ ಮಗ ಶಾಲೆಯಿಂದ ಬಂದೋನೇ ಬ್ಯಾಗನ್ನು ಮೂಲೆಗೆ ಎಸೆದು, ''ಇವರಿಗೆಲ್ಲರಿಗಿಂತ ನಮ್ ಇಂಡಿಯಾ ಕ್ರಿಕೆಟ್ ಟೀಮೇ ಬೆಸ್ಟ್ ಅನ್ನುತ್ತೆ''- ಅಂತ ಗೊಣಗೋಕೆ ಶುರು ಮಾಡಿದ.

ಅಪ್ಪನ ಕರುಳು ಚುರ್‌ಕ್ ಅಂತು. ಕೇಳ್ದೆ 'ಏಕೋ, ಏನಾಯಿತೋ' ಅಂತ.

'ಅಲ್ಲ, ಮನೇಲಿ ನೀನು, ಅಮ್ಮ ಹೊಡೀತೀರಿ. ಸ್ಕೂಲಲ್ಲಿ ಮೇಷ್ಟ್ರು ಹೊಡೀತಾರೆ. ಇವರೆಲ್ಲರಿಗಿಂತ ನಮ್ ಟೀಮೇ ಬೆಟರ್ ಅಲ್ವಾ?' ಅಂತಂದ.

ಅಮ್ಮನ ಕ್ರಿಕೆಟ್ ಜೀನ್ ಮಗನಿಗೂ ಟ್ರಾನ್ಸ್‌ಫರ್ ಆಗಿರುವುದು ಕನ್‌ಫರ್ಮ್ ಆಯಿತು.



ಕ್ರಿಕೆಟ್ ವಿಶೇಷ

# ಕ್ರಿಕೆಟ್ ವಕ್ರಬಂಧ

– ಎನ್. ರಾಮನಾಥ್

| | | | | | | | |
|---|---|---|---|---|---|---|---|
| ೧ | | ೨ | | ■ | ೩ | ■ | ೪ |
| ■ | ■ | | ■ | ೫ | | ■ | |
| ೬ | ೭ | ■ | ೮ | | | | |
| ■ | ೯ | | | ■ | | ■ | |
| ೧೦ | | ■ | | ■ | | ■ | |
| ೧೧ | | ೧೨ | | ೧೩ | ■ | ೧೪ | ■ |
| ■ | ■ | | ■ | ೧೫ | ■ | | |
| ೧೬ | | | ■ | ೧೭ | | | ■ |

**ಎಡದಿಂದ ಬಲಕ್ಕೆ**

೧. ಕಪ್ಪನೆಯವರಿಗೇ ಕಪ್ಪು ಎಂದು ಎರಡೆರಡು ಬಾರಿ ಕಪ್ ಎತ್ತಿದ ಕಪ್ತಾನ – ೪
೫. ಬೇಡಿಕೊಂಡೂ ರನ್ ಕೊಡದೆ ಬ್ಯಾಟ್ಸ್‌ಮನ್‌ಗಳಿಗೆ ಕೋಳ ತೊಡಿಸಿದವನು – ೨
೬. ಬಾಲ್ ಎಂಜಲು ಮಾಡಿ ತಲೆ–ಕಾಯಿಸುವ ಮಂದಿ – ೨
೮. ದುಂಡುದುಂಡಾದ ಮೊಲಕ್ಕೆ ಕ್ರಿಕೆಟ್‌ನ ರೀತಿನೀತಿಯ ಪಾಠ – ೫
೯. ಅಬ್ಬಬ್ಬ ಇವನುದ್ದ ನೋಡು, ಜೋಕೆ, ಎಲ್ಲೋ ಬಾಲ್ ಹೋಯ್ತ್ತು ನೋಡು – ೩
೧೦. ಬ್ಯಾಟ್ಸ್‌ಮನ್ ನಿಲ್ಲೋ ಜಾಗ ಚಿಕ್ಕದಾದ್ರೆ ಇರೋ ದೀರ್ಘಾನೂ ಮಾಯ! ಓ ಜೀಸಸ್ – ೨
೧೧. ಪಶ್ಚಿಮದ ಗಾಳಿಯನ್ನು ಬಿರುಸಾಗಿ ಹೊತ್ತುತಂದ ತಂಡ ಈಗ ಥಂಡಾ! – ೫
೧೫. ಸ್ಟೀಮ್ ಬೇಕಾ ಅಂದ್ರೆ ಎಸ್ ಅನ್ನಲ್ವಂತೆ – ೨
೧೬. ಬೆಟ್ಟಿಂಗ್ ಬೆಟ್ಟ ಕಟ್ಟಿ ಬೆಟ್ಟಕ್ ಢಿಕ್ಕಿ ಹೊಡ್ದ – ೩
೧೭. ಕಿರ್ ಅಂದ ಮಾಣೀನ ಗೂಟದ ಹಿಂದೆ ನಿಲ್ಸಿದ್ರಂತೆ – ೩

**ಮೇಲಿನಿಂದ ಕೆಳಕ್ಕೆ**

೨. law ಬಗ್ಗೆ raw ಆಗಿದ್ದ ಬ್ಯಾಟ್ಸ್‌ಮನ್ ಹೆಸರೇ ನಮ್ಮ ವಿಶ್ವಸುಂದರೀದೂ ಸಹ. – ೨
೩. ತಮಿಳರು 'ಏನೇ' ಎನ್ನಲು ಬಳಸುವ ಪದ, ಕ್ಲೈವ್‌ನ ಮೊದಲ ಹೆಸರು ಸೇರಿದರೆ ಈ ವೇಗಿಯ ಹೆಸರು – ೫
೪. ಎಲ್ಲಾ ಬರತ್ತೆ ಅನ್ನೋ ಪ್ಲೇಯರ್ರು; ಕೆಲವೊಮ್ಮೆ ಇವರನ್ನ ನಂಬಕ್ಕಿಂತ ವಾಸಿ ಪ್ರೇಯರ್ರು – ೫
೫. ಮ್ಯಾಚ್ ಬೋರಾದ್ರೆ ಕುಡುಕ ಇದಾದ್ರೂ ಬೇಕೂಂತಾನೆ! – ೨
೭. ಎಷ್ಟು ಗಿಲ್ಲಿ ಎಷ್ಟು ಕಿರ್‌ಚಿದ್ರೂ ಜೋರಾಗೇ ಬಾರಿಸ್ತಿದ್ ಆಸೀ – ೪
೮. ತಿರುಗಿ ನಿಂತಿರುವ ಅತ್ಯುತ್ತಮ ರನ್ನರ್ ಜೋನ್ಸ್ ಆಸ್ಟ್ರೇಲಿಯನ್ ಯೂನಿವರ್ಸಿಟಿ ಮುಖಂಡ – ೪
೧೦. ಪಶ್ಚಿಮ ಅನ್ನಕ್ಕೆ ಮುಂಚೇನೇ ಟಕಾರ್ ಅಂತ ಹೋದ ಇಂಗ್ಲಿಷ್‌ನವನು – ೨
೧೨. ಕಪ್ ಭವಿಷ್ಯ – ಅತಿಥೇಯರಿಂದ ಅತಿಥಿಯ ತಿಥಿ; ಗೆಲ್ಲುವುದು ಅತಿಥೇಯ! – ೩
೧೩. ಕಿವಿಗೆ ಆಂಗ್ಲದ ಬಹುವಚನ ಸೇರಿದರೆ ನ್ಯೂಝಿಲೆಂಡ್ ತಂಡ; ಎಲ್ಲಾ ತಿರುವುಮುರುವು – ೩
೧೪. ತಿಂತೀನಿ, ಅಂತೀನಿ, ಫಾಸ್ಟ್ ಬೋಲಿಂಗ್ ಮಾಡ್ತೀನಿ; ಆಫ್ರಿಕಾದ ಟೀಮಿಂದ ರಿಟೈರಾಗಿ ನಿಂತೀನಿ! – ೩

*ಪದಬಂಧದ ಸರಿಯುತ್ತರಗಳು 33ನೇ ಪುಟದಲ್ಲಿದೆ*

ಕ್ರಿಕೆಟ್ ವಿಶೇಷ

# ಗತವೈಭವ

**- ಶಿವು**



ಅ ಅಂದ್ರೆ ಅಜರುದ್ದೀನ
ಮಿಂಚಿನ ಓಟ ಕೇಳೀಯೇನ ?
ಷಾರ್ಜಾದಲ್ಲಿ ಅರಿ ಭಯಂಕರ
ಅಂತಿಮ ಪಂದ್ಯ ಶಂಭೋ ಶಂಕರ !



ಕ ಅಂದ್ರೆ ಕಪಿಲ ದೇವ
ಓಡ್ತಾನಂತೆ ಬೆಳಗಿನ ಜಾವ
ಚೆಂಡು ದಾಂಡು ಬೀಸ್ತಾನೆ ಜೋರು
ಬೂಸ್ಟ್ ಕುಡಿದ್ರೆ ಎನರ್ಜಿ ಸ್ಟೋರು !



ತ ಅಂದ್ರೆ ತೆಂಡೂಲ್ಕರ ಸಚಿನ
ತೋರ್ತಾನೆ ಗಾವಸ್ಕರ್ ದಾಂಡಿನ ರುಚಿನ
ಕುಡೀತೀನೆ ಹಾಲ್ನ ತುಂಬಿದ ಬಟ್ಲಿಂದ
ಎದ್ದು ಬಂದ್ನಲ್ಲ ಮೊನ್ನೆ ತಾನೆ ಮನೆ ತೊಟ್ಲಿಂದ !



ವ ಅಂದ್ರೆ ವೆಂಗ ಸರ್ಕಾರ
ಆಟ ಕೂಡ ಬಲು ಬಲು ಖಾರ
ಹತ್ತಾರು ವರ್ಷ ಆಡವ್ನೆ ದಿಲೀಪ
ಹೊಸಬರ್ಗೆಲ್ಲಾ ಇವ್ನೇ ದಾರಿದೀಪ !

ಶ್ರೀ ಅಂದ್ರೆ ನಮ್ಮ ಶ್ರೀಕಾಂತ
ಕರೀತಾರವನ್ನ ''ಕೊಲ್ಟೆ'' ಅಂತ
ದಿನ ರಾತ್ರಿ ಆಟ ಅವನ್ಗೆ ಪ್ರೀತಿ
ಎಗರಿ ಹೊಡೀತಾನೆ ಅಂತ ಪ್ರತೀತಿ





ಸ ಅಂದ್ರೆ ನಮ್ಮ ಸಿದ್ದು ಸರ್ದಾರ್ಜಿ
ಓಪನ್ ಮಾಡೋಕ್ಕೆ ಹಾಕಿದ್ದ ಅರ್ಜಿ
ಆಸ್ಟ್ರೇಲಿಯಾ ಕನಸನ್ನ ಕಾಣ್ತಿದ್ದ ಸಿದ್ದು
ಪಾಪ ಆಯ್ತಲ್ಲ ಅವನ ಪ್ರವಾಸ ರದ್ದು !



ರ ಅಂದ್ರೆ ರವಿ ಶಾಸ್ತ್ರಿ
ಅವನ ತಲೆ ತುಂಬಾ ಸ್ತ್ರೀ, ಸ್ತ್ರೀ
ಆದ್ರೂ ಪರವಾಗಿಲ್ಲ ಹೊಡೆದ ಒಂದು ನೂರು
ದಕ್ಷಿಣ ಆಫ್ರಿಕಾ ಮುಂದೆ ಇವಂದೇ ಜೋರು !



ಮ ಅಂದ್ರೆ ಮಂಜರೇಕರ
ಇವನಿದ್ದಾಂದ್ರೆ ರನ್ನಿಗಿಲ್ಲ ಬರ
ಮೂರ್ತಿ ಚಿಕ್ಕದಾದ್ರೂ ಕೀರ್ತಿ ಬಹಳ
ತಂದೆಗೆ ತಕ್ಕ ಮಗ, ಭಾರೀ ಕುಳ !

ಪ ಅಂದ್ರೆ ಪ್ರಭಾಕರ
ತೆಗೀತಾನೆ ವಿಕೆಟ್ ಸರ ಸರ
ಕಪಿಲನ ಜೊತೆ ಇವನ್ದೇ ಜೋಡಿ
ಬೋಲ್ ಮಾಡ್ತಾ ಇದ್ರೆ ನೋಡೋರ್ಗೆ ಮೋಡಿ !





ಗತ ವೈಭವ ಅಂತ ಚಿಂತೆ ಸಲ್ಲ
ಧೋನಿ ಪಡೆ ಯಾರ್ಗೂ ಕಡಿಮೆ ಇಲ್ಲ
ವಿಶ್ವ ಕಪ್ ನಮ್ಮದೇ ಅನ್ನೋದು ಖಾತ್ರಿ
ಸಚಿನ್ ಇದ್ದಾಗ ಸಂಶಯ ಯಾಕ್ರೀ ?

---

**STATEMENT OF OWNERSHIP OF APARANJI (KANNADA MONTHLY) (SEE RULES AND FORM IV)**

| | | | |
|---|---|---|---|
| 1. | Place of Publication | : | Bangalore |
| 2. | Periodicity of Publication | : | Monthly |
| 3. | Printer's Name | : | V.R. Nath |
| | Nationality | : | Indian |
| | Address | : | Ravi Graphics<br>49, 4th Cross. SSI Area<br>Rajaji Nagar<br>Bangalore -560010 |
| 4. | Publisher's Name | : | Koravanji Aparanji Trust |
| | Address | : | No 36, 6th Main Road<br>Malleswaram<br>Bangalore- 560003 |
| 5. | Editor's Name | : | M.ShivaKumar |
| | Nationality | : | Indian |
| | Address | : | 36, 6th Main Road<br>Malleswaram<br>Bangalore 560003 |
| 6. | Name and address of Individuals who own the Paper | | Koravanji Aparanji Trust<br>36, 6th Main Road<br>Malleswaram<br>Bangalore 560003 |

I M.Shivakumar hereby declare that the particulars given above are true to the best of my knowledge and belief.


1-3-2011
Bangalore

**M. ShivaKumar**
(Signature of the Publisher)

ಕ್ರಿಕೆಟ್ ವಿಶೇಷ

# ಒಂದು ದಿನದ ಪಂದ್ಯ

- ಪ್ರಕಾಶ್




ಕುಳಿತಿಹುದು ಜನಸಮೂಹ ಕಾತರದಿ
ಕಾಲು ಕೆರೆಯುವ ತವಕದಿಂ ಆಟದ ಬ
ಯಲಿನಲಿ ಉದ್ಗಾರಗಳ ಮೊರೆಯುವ
ಅಲ್ಲಲ್ಲಿ ಹರ್ಷದಿಂ ಕೂಗುತ್ತ
ಬೆಳಗಿನಾ ಹೊಂಬಿಸಿಲಿನಲಿ !

ಇತ್ತ ಪೆವಿಲಿಯನ್ ಗರ್ಭದಿಂ
ಅತ್ತಿತ್ತ ನೋಡದೆಯೆ ಬಹರಂಪೈರುದ್ವಯ
ನೀತಿನಿಯಮಾವಳಿಯ ಪಾಲಿಸಲು
ಭೀತಿಯಿಲ್ಲದೆ ನಡೆವರ್ ಮುಂಚೂಣಿಯ
ಅತಿರಥರೋಪಾದಿಯಲಿ !

ವಿದ್ಯುಕ್ತ ಘಳಿಗೆಯಲಿ ಮನೆ ದೇವರ ನೆನೆದು
ತಂಡದ ನಾಯಕನು ಮೇಣವನ ಸಂ
ಗಡಿಗರುತ್ಸುಕತೆಯಿಂದ ನಡೆದು ಬಹ
ರೆದುರಾಳಿಗಳ ಸದೆಬಡಿಯಲ್
ಮದದಾನೆಗಳಂತೆ ಶೋಭಿಸುತ !

ಅಗ್ರ ಜನಾಗಣತಿಯ ಶಿರಸಾಪಾಲಿಸ
ಲುಗ್ರ ರೂಪದ ಪೇಸ್ ಬೌಲರನು
ನಿಗ್ರಹಿಸುವೆನೀ ಕುನ್ನಿಗಳನೆಂ
ದಾಗ್ರಹದಿಂದ ಧಾವಿಸಿ ಬರುತ ಕೆಂ
ಪು ಗ್ರಹವನೆಸೆದನು ರೋಷದಲಿ !

ಬಿಸಿಲಿನಲಿ ಹೊಳೆಯುತ್ತ ವೇಗದಿಂ
ರೇಸುತಿಹ ಚೆಂಡನ್ನು ದಾಂಡಿಗನು
ಬೀಸಲೆತ್ನಿಸಿದನ್, ಅಕಟಕಟ
ನೈಸಾದ ಎಡ್ಜನ್ನು ಕೀಪರನು ಡೈವುತ್ತ
ರಸವತ್ಕ್ಯಾಚನು ತಾ ಹಿಡಿದೆದ್ದನು !

ಕೂರಂಬಿನ ತೆರದಿ ಬಹ ಚೆಂಡುಗಳನೆ
ದುರಿಸಲೆತ್ನಿಸಿದ ಯೋಧರೋ ಸಿಂಹಿಣಿಯ ಕಂಡ
ಕುರಿ ಮಂದೆಯಂತೆ ತಲ್ಲಣಿಸಿದರು ಕಣಾ
ಸರಸರನೆ ತಮ್ಮಾಟವನು ಮುಗಿಸಿ
ಶರಣಾದರೋ ನೂರಿಪ್ಪ ತೋಟಗಳಿಗೆ !

ಗಮ ಘಮಿಸುವಾ ಭೋಜನವ ಮೆದ್ದು
ನಮ್ಮದೇ ವಿಜಯಶ್ರೀ ಎಂದು ಹಿಗ್ಗುತ ಪ
ಶ್ಚಿಮದೀಂಡೀಸರಾದಿ ದಾಂಡಿಗ ಚತುರರ್
ಹೋಮ್ ಟೀಮಿನ ಹೋಮ ಮಾಳ್ಪೆವೆನುತ
ರಮ್ಯ ನಡಿಗೆಯಲಿಳಿದರಂಕಣಕೆ !

ಸೂರ್ಯ ರಶ್ಮಿಯಲಿ ಹೊಳೆದುವಾ ದಾಂಡುಗಳು
ಅರಿ ತಂಡದ ಬೌಲಿಂಗನೆಲ್ಲವಂ ನಾಲ್ಕು
ಆರಕೆ ಹೊಡೆದಟ್ಟುತಿಹ ಕಲಿಗಳಾ
ಶೌರ್ಯಕ್ಕೆ ತತ್ತರಿಸಿದರೋ ನಮ್ಮ ಪಟುಗಳು
ನೆರೆದ ಜನಸ್ತೋಮ ಭೋ ಎಂದುದು !

ಸ್ಕೋರರನ ತಲೆ ಗಿರ್ರೆಂದಿತಾ ರನ್ನುಗಳ ಮಹಾ
ಪೂರದಲಿ, ನಾಯಕನ ಮನ ಬೆದರಿದುದು
ತಾರಕ ಮಂತ್ರವೇನಿವರ ಔಟಿಸಲೆಂದು
ಪರಿಪರಿಯ ತಂತ್ರಗಳ ಹೂಡಿದನ್, ಆದರೂ
ಸರಿ ಸಾಟಿಯಿಲ್ಲದೆಯೆ ಮುಗಿದುದಾ ಪಂದ್ಯ !

ಅವ ಹೀಗೆ, ಇವ ಹಾಗೆ ಎಂದೆನುತ ಚರ್ಚಿಸುವ
ಭಾವ ಪರವಶ ಕ್ರೀಡಾ ಪ್ರೇಮಿ ಸಮೂಹವದು
ಯುವ ಪಟುಗಳಂ ಟೀಕಿಸುತ ತೆಗಳುತ್ತ
ಭವಿಷ್ಯದ ಮ್ಯಾಚುಗಳ ಚಿಂತಿಸುವ
ಸವೆಸಿತೋ ಸ್ಟೇಡಿಯಂ ಬಳಿಯ ದಾರಿಯನು !

# ಮೂರನೆ ಟೆಸ್ಟ್

**– ಆನಂದ**

**ಮು**ಗಿಲು ಹಳ್ಳಿ ಇಲೆವೆನ್ ಮತ್ತು ಹಬ್ಬಿಗುಬ್ಬಾಲೆ ಇಲೆವೆನ್‌ಗಳ ನಡುವೆ ಮೂರನೇ ಟೆಸ್ಟ್ ಪಂದ್ಯ ನಾಳೆ ವೀರಾಂಜನೇಯ ಸ್ವಾಮಿ ಕ್ರಿಕೆಟ್ ಮೈದಾನದಲ್ಲಿ ಪ್ರಾರಂಭವಾಗಲಿದೆ. ಮುಗಿಲುಹಳ್ಳಿ ತಂಡ ಇಂದು ಬೆಳಿಗ್ಗೆ ಲಕ್ಷ್ಮೀನರಸಿಂಹ ಬಸ್‌ನಲ್ಲಿ ಬಂದು ಸೇರಿ, ಈಗಾಗಲೇ ಎರಡು ಬಾರಿ ಊರಿನ ಆಲದ ಮರದ ಕೆಳಗೆ ನೆಟ್ ಪ್ರಾಕ್ಟೀಸ್ ಮಾಡಿತು. ಈ ತಂಡದ ನಾಯಕ ಮುನೇಶ್ವರ ಸುದ್ದಿಗಾರರೊಂದಿಗೆ ಮಾತನಾಡುತ್ತಾ ತಮ್ಮ ತಂಡದ ಎಲ್ಲಾ ಆಟಗಾರರು ಫಿಟ್ ಇದ್ದು ಪಂದ್ಯದಲ್ಲಿ ಪಾಲ್ಗೊಳ್ಳಲು ಕಾತರದಿಂದಿದ್ದಾರೆ ಎಂದು ತಿಳಿಸಿದರು. ಹೆಬ್ಬಿಗುಬ್ಬಾಲೆ ತಂಡ ಇಂದು ಸಂಜೆ ಎಸ್.ಎಂ.ಎಸ್. ಷಟಲ್ ಬಸ್‌ನಲ್ಲಿ ಬರಲಿದೆ. ಮುಗಿಲು ಹಳ್ಳಿ ತಂಡ ಊರಿನ ಟೌನ್ ಬಾಯ್ಸ್ ಪ್ರೈಮರಿ ಸ್ಕೂಲ್‌ನಲ್ಲಿ ಇಳಿದುಕೊಂಡಿದ್ದರೆ, ಹೆಬ್ಬಿಗುಬ್ಬಾಲೆ ತಂಡಕ್ಕೆ ಉರ್ದು ಸ್ಕೂಲನ್ನು ಬಿಟ್ಟುಕೊಡಲಾಗಿದೆ.

ವೀರಾಂಜನೇಯ ಸ್ವಾಮಿ ಮೈದಾನದ ಪಿಚ್ ಇಬ್ಬರಿಗೂ ಅನುಕೂಲವಾಗಿದೆ ಎಂದು ತಜ್ಞರ ಅಭಿಪ್ರಾಯ. ಇಬ್ಬರಿಗೂ ಎಂದರೆ ಬ್ಯಾಟ್ಸ್‌ಮನ್ ಮತ್ತು ಬೌಲರ್‌ಗಳಿಗೆ, ಪಿಚ್ ತಯಾರಿಸಿದ ಗ್ರೌಮಡ್ಸ್ ಮ್ಯಾನ್ ಈರಣ್ಣ ವಿವರಿಸಿದಂತೆ ಒಂದು ಕಡೆ ಬೌಲರ್‌ಗಳಿಗೆ ಸಹಾಯವಾಗುವಂತಿದ್ದರೆ ಇನ್ನೊಂದು ಕಡೆ ಬ್ಯಾಟ್ಸ್‌ಮನ್ ಪ್ಯಾರಡೈಸ್. ಇದನ್ನು ಸಾಧಿಸಲು ವಿಶೇಷ ರೀತಿಯಲ್ಲಿ ಪಿಚ್ ತಯಾರಿಸಲಾಗಿದೆ ಎಂದು ಅವರು ತಿಳಿಸಿದರು. ಪಿಚ್ ಅರ್ಧ ಭಾಗಕ್ಕೆ ಮುಗಿಲು ಹಳ್ಳಿಯ ಕೆರೆಯ ಮಣ್ಣನ್ನೂ ಮತ್ತು ಇನ್ನರ್ಧ ಭಾಗಕ್ಕೆ ಹೆಬ್ಬಿಗುಬ್ಬಾಲೆ ಕೆರೆಯ ಮಣ್ಣನ್ನು ಉಪಯೋಗಿಸಿದ್ದೇನೆ ಎಂದು ಈರಣ್ಣ ಹೇಳಿದರು.

ನಾಳೆಯಿಂದ ಇಲ್ಲಿನ ಸುತ್ತಮುತ್ತಲಿನ ಶಾಲೆಗಳಿಗೆ ರಜಾ ಘೋಷಿಸಲಾಗಿದೆ. ಇದರಿಂದ ಎಲ್ಲಾ ಶಾಲೆಗಳ ಹೈಕಳುಗಳು ಪಂದ್ಯ ನೋಡಲು ಕಿಕ್ಕಿರಿದು ಜಮಾಯಿಸುವ ನಿರೀಕ್ಷೆ ಇದೆ. ಆದರೆ ಶಾಲೆಗಳಿಗೆ ರಜಾ ಘೋಷಿಸಲು ಮುಖ್ಯ ಕಾರಣ ಪ್ರೇಕ್ಷಕರನ್ನು ಆಟ ನೋಡಲು ಕರೆಸಿಕೊಳ್ಳುವುದಲ್ಲ, ಆ ಶಾಲೆಯ ಉಪಾಧ್ಯಾಯರ ಸೇವೆ ಪಂದ್ಯ ನಡೆಸಲು ಅತ್ಯವಶ್ಯಕವಾಗಿ ಬೇಕಾದ್ದರಿಂದ ಈ ಕ್ರಮ ಕೈಗೊಳ್ಳಬೇಕಾಯಿತು ಎಂದು ಆ ಪ್ರದೇಶದ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧ್ಯಕ್ಷ ಹಾಗೂ ತಾಲ್ಲೂಕ್ ಬೋರ್ಡ್ ಅಧ್ಯಕ್ಷ ಚೌಡೇಗೌಡ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು. ಆದರಂತೆ ಉಪಾಧ್ಯಾಯರನ್ನು ಅಂಪೈರ್, ಸ್ಕೋರರ್ ಮುಂತಾದವರನ್ನಾಗಿ ನೇಮಿಸಲಾಗಿದೆ.

ನಾಳೆ ಪ್ರಾರಂಭವಾಗಲಿರುವ ಪಂದ್ಯ ಈ ಮೈದಾನದಲ್ಲಿ ನಡೆಯುತ್ತಿರುವ 38ನೇ ಪಂದ್ಯವಾಗಲಿದ್ದು ಮೊದಲಿನ 37 ಪಂದ್ಯಗಳೂ ಡ್ರಾದಲ್ಲಿ ಮುಕ್ತಾಯಗೊಂಡಿವೆ. ಈ ಬಾರಿಯಾದರೂ ಒಂದು ನಿರ್ಣಯ ಸಿಗಲಿ ಎಂದು ವೀರಾಂಜನೇಯ ಸ್ವಾಮಿ ಗುಡಿಯಲ್ಲಿ ವಿಶೇಷ ಅರ್ಚನೆ ಇಂದು ಸಂಜೆ ನಡೆಯಲಿದೆ. ಇದಾದ ನಂತರ ಎರಡೂ ಪಂಗಡಗಳು ತಮ್ಮ ತಂಡದ ಮೇನೇಜರುಗಳ ನೇತೃತ್ವದಲ್ಲಿ ಗೆಲುವು ಕೋರಿ ವಿಶೇಷ ಪ್ರಾರ್ಥನೆ ಸಲ್ಲಿಸಲಿವೆ. ಈ


ಕಾರಣದಿಂದ ಎರಡೂ ತಂಡಗಳನ್ನು ಆಟ ಪ್ರಾರಂಭಕ್ಕೆ ಮುಂಚೆ ದೇವಸ್ಥಾನದ ಅರ್ಚಕರಿಗೆ ಪರಿಚಯ ಮಾಡಿಕೊಡಬೇಕೆಂದಿದ್ದ ಯೋಜನೆಯನ್ನು ಕೈಬಿಡಲಾಗಿದೆ. ಬೇರೆ ಯಾರಿಗೆ ಪರಿಚಯ ಮಾಡಿಕೊಡಬೇಕು ಎಂಬುದರ ಬಗ್ಗೆ ಇನ್ನೂ ತೀರ್ಮಾನ ಕೈಗೊಂಡಿಲ್ಲ. ಇಂದು ರಾತ್ರಿ ಚೌಡೇಗೌಡರ ಮನೆಯಲ್ಲಿ ನಡೆಯುವ ವಿಶೇಷ ಸಭೆಯಲ್ಲಿ ಇದರ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿದುಬಂದಿದೆ. ಈ ಸಂದರ್ಭದಲ್ಲಿ ಶ್ರೀಮತಿ ಚೌಡೇಗೌಡರ ಹೆಸರು ಕೇಳಿಬರುತ್ತಿದೆ.

ಇತರ ಎಲ್ಲಾ ನಿರ್ಣಾಯಕ ಪಂದ್ಯಗಳಂತೆ ಇಲ್ಲೂ ಟಾಸ್ ಯಾರು ಗೆಲ್ಲುತ್ತಾರೆ ಎಂಬುದಕ್ಕೆ ಮಹತ್ವವಿದೆ. ಆದರೆ ಟಾಸ್ ಗೆದ್ದ ತಂಡ ಮೊದಲು ಫೀಲ್ಡ್ ಮಾಡಲು ಆಯ್ಕೆ ಮಾಡುವುದು ಖಂಡಿತ. ಏಕೆಂದರೆ ಪಿಚ್ ಕೊನೆಯ ದಿನಗಳಲ್ಲಿ ಬೌಲರ್‌ಗಳಿಗೆ ಸಹಾಯ ಮಾಡದು ಎಂದಲ್ಲ. ಹೊಸ ಬಾಲ್ ಒಂದೇ ಇರುವುದರಿಂದ ಟಾಸ್ ಗೆದ್ದ ಟೀಂ ಅದರ ಉಪಯೋಗ ಪಡೆದುಕೊಳ್ಳಲು ಇಚ್ಛಿಸುವುದು ಸಹಜ. ಇದು ವಿವಾದಾತ್ಮಕ ಅಂಶವಾಗಿರಬಹುದು. ಆದರೆ ಇಲ್ಲಿ ರೂಢಿಯಲ್ಲಿರುವುದು ಇದೇ.

ಆಟ ನೋಟಲು ಹಲವಾರು ವ್ಯವಸ್ಥೆಗಳನ್ನು ಮಾಡಲಾಗಿದೆ. ನಿಯಂತ್ರಣ ಮಂಡಲಿಯ ಸದಸ್ಯರಿಗೆ, ಆಹ್ವಾನಿತರಿಗೆ ಮತ್ತು ಆಟಗಾರರಿಗೆ ಬೆಂಚ್‌ಗಳನ್ನು ಹಾಕಲಾಗಿದ್ದು ಇತರ ಪ್ರೇಕ್ಷಕರಿಗೆ ಜಮಖಾನೆ ಹಾಸಲಾಗಿದೆ. ಪಂದ್ಯದುದ್ದಕ್ಕೂ ನೀರು ಮಜ್ಜಿಗೆಯ ವಿತರಣೆಯಾಗಲಿದೆ. ಇತರ ಕಡೆಗಳಿಂದ ಅನೇಕ ಎತ್ತಿನಗಾಡಿಗಳು ಬರುವ ನಿರೀಕ್ಷೆ ಇದ್ದು ಜಾನುವಾರುಗಳಿಗೆ ಹುಲ್ಲು ನೀರಿನ ವ್ಯವಸ್ಥೆ ಬಗ್ಗೆ ನಿಗಾ ಕೊಡಲಾಗಿದೆ. ಈಗಾಗಲೇ ಅನೇಕ ಅಂಗಡಿಗಳು ಕ್ರಿಕೆಟ್ ಮೈದಾನದಲ್ಲಿ ತಲೆ ಎತ್ತಿವೆ.

ಇಲ್ಲಿಂದ ಹೊರಡುವ 'ಕೂಗು', 'ಕಹಳೆ' ದಿನಪತ್ರಿಕೆಗಳು ಪಂದ್ಯದ ದಿನ ಕ್ರಿಕೆಟ್ ಸ್ಪೆಷಲ್ ಆವೃತ್ತಿ ಹೊರತರಲು ಯೋಜನೆ ಹಾಕಿವೆ. ಕನ್ನಡದಲ್ಲಿ ಮಾತ್ರ ವೀಕ್ಷಕ ವಿವರಣೆ ಪ್ರಸಾರವಾಗಬೇಕು ಎಂದು ಪಟ್ಟು ಹಿಡಿದ ಇಲ್ಲಿನ ಕನ್ನಡ ಚಳುವಳಿಗಾರರ ವಾದವನ್ನು ಒಪ್ಪದ ಆಕಾಶವಾಣಿ, ವೀಕ್ಷಕ ವಿವರಣೆಯನ್ನೇ ರದ್ದುಪಡಿಸಿದೆ. ಹಾಗೇ, ಬಣ್ಣದಲ್ಲಿ ಮಾತ್ರ ದೂರದರ್ಶನ ಪ್ರಸಾರ ಮಾಡಬೇಕು ಎಂದು ಚೌಡೇಗೌಡರು ಮೊಂಡು ಹಿಡಿದಿದ್ದರಿಂದ ಈ ಪಂದ್ಯವನ್ನು ಟಿ.ವಿ.ಯಲ್ಲಿ ನೋಡಲು ಸಾಧ್ಯವಿಲ್ಲ. ✵





# ಕ್ರಿಕೆಟ್ ಗವನಗಳು

**- ಎನ್. ನಾಗ್**

## ವಿಶ್ವಕಪ್

*ಆಶಾವಾದಿಗಳು ಹೇಳುತ್ತಾರೆ*
*ಖಂಡಿತ ಸಿಗುವುದು ವಿಶ್ವಕಪ್*
*ನಿರಾಶಾವಾದಿಗಳು ಗೊಣಗುತ್ತಾರೆ*
*ಸಿಗುವುದು ಚಿಕ್ಕನಾಯಕನಹಳ್ಳಿ ಕಪ್*

## ಕಾಮಧೇನು

*ಬೆಟ್ ಇಟ್ಕೊಂಡು ಬೆಳೆದರೆ*
*ಏನೂ ಸಿಗದು, ಅಯೋಗ್ಯ*
*ಬ್ಯಾಟ್ ಇಟ್ಕೊಂಡು ಬೆಳೆದರೆ*
*ಸುರಿಯುವುದು ಸೌಭಾಗ್ಯ*

## ಒಮ್ಮತ

*ಜಾತಿಗಳು ನೂರಾರು*
*ಪಕ್ಷಗಳು ಹತ್ತಾರು*
*ಎಲ್ಲರ ಬಯಕೆ ಒಂದೇ*
*ವಿಶ್ವಕಪ್ ಭಾರತದಾಗಲೆಂದೇ*

## ಆತುರ ಬೇಡ

'Fine Leg' *ಅನ್ನು ಹಿಂದೆ ತಳ್ಳಿದ*
*ಇದ್ದ ಒಂದು* 'Slip' *ಅನ್ನು ತೆಗೆದುಬಿಟ್ಟ*
*ಏಕಿಷ್ಟು ಉದ್ರೇಕ ಸ್ವಾಮೀ*
*ಹೇಳುತ್ತಿರುವುದು ಕ್ರಿಕೆಟ್ ಬಗ್ಗೆ !*

## ಬಾಳು

BPL, APL
*ಬರೀ ಗೋಳು*
*ನಿಜವಾದ ಬಾಳು*
IPL, IPL

## ತಂದೆತಾಯಿಗಳ ಅಳಲು

*ಎಷ್ಟು ಸಿಗುವುದೋ ಅಂಕ*
*ಏಕೆ ಬೇಕು ಈ ಆತಂಕ*
*ಈಗಲೇ ಬರಬೇಕೇ ಕ್ರಿಕೆಟ್ ?*
*ಬೇಡ ಹಣೆಯ ಮೇಲೆ ವಿಕೆಟ್ !*

## ಮನ್ನಣೆ

*ಬರೆದರೆ, ಹಾಡಿದರೆ*
*ಕುಣಿದರೆ, ನಟಿಸಿದರೆ*
*ಸಿಗದು ಪುರಸ್ಕಾರ*
*ಬಾರಿಸು, ಸಿಕ್ಸರ !*

* * * * * *

ಕ್ರಿಕೆಟ್ ವಿಶೇಷ

# ಕಮಲಾನಗರದ ಕ್ರಿಕೆಟ್ ಮ್ಯಾಚ್ !

**- ಗಣೇಶ್ ಹೆಗ್ಗಡೆ**

‘‘**ಸ**ರ್, ನವದೆಹಲಿಯಿಂದ ತಮಗೆ ತುರ್ತು ಕರೆ ಬಂದಿದೆ. ತಕ್ಷಣ ರಿಸೀವ್ ಮಾಡಿ.’’

ತಮ್ಮ ಖಾಸಗಿ ಪಿ.ಎ. ದನಿ ಕೇಳಿ, ಅರೆ ನಿದ್ರಾವಸ್ಥೆಯಲ್ಲಿದ್ದ ಮುಖ್ಯ ಮಂತ್ರಿಗಳು ಬೆಚ್ಚಿ ಬಿದ್ದು, ರಿಸೀವರನ್ನು ಕೈಗೆತ್ತಿಕೊಂಡರು.

‘‘ಆಯ್ತು ಸಾರ್, ಖಂಡಿತಾ ಎಲ್ಲಾ ಜವಾಬ್ದಾರಿ ತಗೋತೀನಿ. ಆರು ವಿಶ್ವಕಪ್ ಪಂದ್ಯಗಳೂ ಇಲ್ಲೇ ಕಮಲಾನಗರದಲ್ಲೇ ನಡೀರಿ. ಖಂಡಿತಾ ಬಳ್ಳಾರೀಲಿ ಮಾತ್ರ ಬ್ಯಾಡಿ. ನಮ್ಗೆ ಕಂಟ್ರೋಲ್ಗೇ ಸಿಗೊಲ್ಲಾ.’’

**ಎಲ್ಲಾ ಮ್ಯಾಚ್ ಫಿಕ್ಸಿಂಗ್ ಕಚೇರಿಗಳ ಮೇಲೆ ದಾಳಿ ಮಾಡಲಾಯಿತು. ಆದರೆ...**

ಫೋನ್ ಇಟ್ಟ ತಕ್ಷಣ ಪಿ.ಎ. ಕಾರ್ಯ ಪ್ರವೃತ್ತರಾದರು.

‘‘ಏನ್ಸಾರ್, ಶುಭ ಸಮಾಚಾರ?’’

‘‘ಈ ಸರ್ತಿಯ ವಿಶ್ವಕಪ್‌ನ ಆರು ಪಂದ್ಯಗಳನ್ನೂ ನಾವೇ ಹೋಸ್ಟ್ ಮಾಡ್ಬೇಕಂತೆ. ಈ ಎಲ್ಲಾ ಪಂದ್ಯಗಳೂ ‘‘ಗೋಲ್ಡನ್ ಸರ್’’ ಸ್ಟೇಡಿಯಂನಲ್ಲಿ ಸುರಕ್ಷಿತವಾಗಿ ನಡೀತವೆ ಎಂದು ಭರವಸೆ ಕೊಟ್ಟಿದ್ದೀನಿ.’’

‘‘ಗುಡ್ ಸರ್.’’

‘‘ಅಂದ್ಹಾಗೆ, ಈ ಸ್ಟೇಡಿಯಂನ ಲ್ಯಾಂಡು ಇನ್ನೂ ಹಾಗೇ ಇದೆ ತಾನೆ?’’

‘‘ಯಾಕ್ಸಾರ್ ಈ ಕೆಟ್ಟ ಅನುಮಾನ?’’

‘‘ಯಾಕೂ ಇಲ್ಲ, ಲ್ಯಾಂಡ್‌ಗಳ ಡಿ–ನೋಟಿಫೈ ಫೈಲುಗಳಿಗೆ ಸಿಕ್ಕಾಪಟ್ಟೆ ಸಹಿ ಹಾಕಿ... ಹಾಕಿ ಭಯವಾಗ್ಬಿಟ್ಟಿದೆ!... ಹಾಗೇ... ಕಮಿಷನರ್ ಶಂಕ್ರಪ್ಪನವರಿಗೆ ಫೋನ್ ಹಚ್ಚಿ.’’

‘‘ಸರ್, ಆ ಕಡೆ ಶಂಕ್ರಪ್ಪನವರು ಲೈನಿನಲ್ಲಿದ್ದಾರೆ.’’

‘‘ರ‍್ರೀ... ಶಂಕ್ರಪ್ಪ ವಿಷಯ ತಿಳೀತಲ್ಲಾ, ನಮ್ಮ ಸರ್ಕಾರಕ್ಕೆ ಒಳ್ಳೇ ಹೆಸ್ರು ಬರ್ಬೇಕ್ರಿ. ‘ಗೋಲ್ಡನ್ ಸರ್’ ಸ್ಟೇಡಿಯಂನ ಸುತ್ಲೂ ಬಿಗೀ ಪೋಲಿಸ್ ಬಂದೋಬಸ್ತು ಆಗ್ಬೇಕು. ಇಂಟಲಿಜೆನ್ಸ್ ವಿಂಗ್‌ನವರು ಚುರುಕಾಗಿರಲಿ.’’

‘‘ಎಸ್ ಸರ್.’’

‘‘ಹಾಗೇನೆ, ನಮ್ಮ ಪಕ್ಷದ ಕಾರ್ಯಕರ್ತರಿಗೆ 2000 ಪಾಸ್ ವ್ಯವಸ್ಥೆ ಆಗ್ಬೇಕು.... ಯಾಕ್ರೀ.... ಮಾತಾಡ್ತಿಲ್ಲ? ಶಂಕ್ರಪ್ಪ... ರ್ರೀ.. ಶಂಕ್ರಪ್ಪ.......’’

‘‘ಕ್ಷಮಿಸಿ ಸರ್. ಫೋನ್ ಡೆಡ್ ಆಗಿ ಎರಡು ನಿಮಿಷ ಆಯ್ತು. ನೆಟ್‌ವರ್ಕ್ ಪ್ರಾಬ್ಲಮ್ ಇರ್ಬೇಕು.’’

★★★

‘‘ಮಾರ್ಚ್ 6 ರಂದು, ವಿಶ್ವಭಾರತಿ ಇಲವೆನ್‌ಗೂ ಕವಲಂದೆ ಇಲವೆನ್‌ಗೂ ಪ್ರಪ್ರಥಮ ಪಂದ್ಯ ಸಾರ್. ಉದ್ಘಾಟನೆ ಸಂಪ್ರದಾಯದಂತೆ ಘನತೆವೆತ್ತ ಗವರ್ನ್‌ರ್ ಕೈಲಿ ತಾನೆ?’’

‘‘ಡ್ಯಾಮ್ ಇಟ್. ಅವ್ರ ಹೆಸ್ರು ಮಾತ್ರ ನನ್ಮುಂದೆ ಎತ್ತಬ್ಯಾಡಿ. ಏಳರ ಛಳಿ ಬಂದ್ಹಾಗೆ ಆಗುತ್ತೆ. ಯಾರಾದ್ರು ಸಿನಿಮಾ ನಟಿ ಸಿಗುಲ್ಲವ್ವೇನ್ರಿ?’’

‘‘ಸಿಕ್ತಾರೆ ಸರ್. ಅಂದ್ಹಾಗೆ ನಿಮಗೆ ಹೋಮ, ಹವನದಲ್ಲಿ ಅಪಾರ ನಂಬಿಕೆ. ಹೋಮ ಮಾಲಿನೀನ ಒಪ್ಪಿಸಿದ್ರೆ ಹ್ಯಾಗೆ?’’

‘‘ಗುಡ್ ಐಡಿಯಾ. ಹೈ ಕಮ್ಯಾಂಡ್‌ಗೂ ಇದ್ರಿಂದ ಸಂತೋಷ ಆಗುತ್ತೆ. ಜತೆಗೆ ನನ್ನ ಕುರ್ಚೀನೂ ಕೊಂಚ ಭದ್ರ ಆಗುತ್ತೆ.’’

‘‘ಸರ್, ಶಂಕ್ರಪ್ಪನವರು ಆಕಡೆ ಲೈನಿನಲ್ಲಿದ್ದಾರೆ.’’

‘‘ಹೇಳಿ ಶಂಕ್ರಪ್ಪ.. ಹ್ಞಾಂ!........ ಏನಂದ್ರಿ?’’

‘‘ಸ್ಟೇಡಿಯಂನ ಎಂಟೂ ಮೂಲೆಗಳಲ್ಲಿ ಬೊಂಬೆ ಹೂತಿಟ್ಟಿದ್ದಾರೆಯೆ? ಬೊಂಬೇನೊ.... ಬಾಂಬೊ?.... ಸರಿಯಾಗಿ ನೋಡಿದರೇನ್ರಿ?...... ನನ್ಗೊತ್ತಿತ್ರಿ.... ಇದು...... ಕುಮಾರಸ್ವಾಮಿ ಲೇಔಟಿನಲ್ಲಿರುವ ನಮ್ಮ ಶತ್ರುಗಳ ಕೈವಾಡಾಂತ.....’’

‘‘ಸರ್, ಫಾರೆನ್ಸಿಕ್ ಲ್ಯಾಬ್‌ನ ರಿಪೋರ್ಟ್ ಪ್ರಕಾರ ಈ ಬೊಂಬೆಗಳಿಗೂ ವಿಧಾನ ಸೌಧದ ಸುತ್ತ ಸಿಕ್ಕ ಬೊಂಬೆಗಳಿಗೂ ತಾಳೇ ಇದೆ ಸರ್, ಜತೆಗೆ ಅರಿಶಿನದ ದಾರ, ನಿಂಬೆಹಣ್ಣು , ಕೋಳಿ ಮೊಟ್ಟೆ.... ಇವೆಲ್ಲವನ್ನೂ ನಮ್ಮವರೂ ಸೀಜ್ ಮಾಡಿದ್ದಾರೆ ಸರ್.’’

‘‘ವೆರಿಗುಡ್, ನಿಮ್ಮ ಸಿಬ್ಬಂದಿಗೆಲ್ಲಾ ಅವಾರ್ಡ್‌ಗೆ ಶಿಫಾರಸ್ಸು ಮಾಡಿ.’’

‘‘ಸರ್, ಇನ್ನೊಂದ್ಸಮಾಚಾರ. ಬಸವನಗುಡಿ, ರಾಜಾಜಿನಗರ, ಮಲ್ಲೇಶ್ವರಂ ಏರಿಯಾಗಳಲ್ಲಿ ‘ಮ್ಯಾಚ್ ಫಿಕ್ಸಿಂಗ್’ ಆಫೀಸುಗಳು ಓಪನ್ ಆಗಿದೆ ಅಂತ ಪ್ಯಾದೆಗಳು ಸುದ್ದಿ ತಂದಿದ್ದು, ಮಿಂಚಿನಂತೆ ದಾಳಿಮಾಡಿ ಅವ್ರನ್ನೆಲ್ಲಾ ಎತ್ತಾಕ್ಕೊಂಡು ಬಂದ್ವಿ ಸರ್.’’

‘‘ವೆರಿ ಗುಡ್’’

‘‘ಸರ್, ಆದರೆ ಡೀಟೈಲಾಗಿ ತನಿಖೆ ಮಾಡ್ದಾಗ ತಿಳಿದ ಸತ್ಯ ಅಂದ್ರೆ, ಅವರ್‍ಯಾರೂ ಕ್ರಿಕೆಟ್ ಮ್ಯಾಚ್... ಫಿಕ್ಸಿಂಗ್‌ನವರಲ್ಲಾ.’’

‘‘ಮತ್ತೆ?’’

''ಗಂಡು-ಹೆಣ್ಣು ಮ್ಯಾಚ್ ಫಿಕ್ಸ್ ಮಾಡೊ ಮ್ಯಾರೇಜ್ ಬ್ಯೂರೋ ಆಫೀಸಿನವರು.''

''ಸ್ಟುಪಿಡ್!''

★★★

''ಸರ್, ಪಕ್ಷದ ಅಧ್ಯಕ್ಷ ಶಿವಪ್ಪನವರು ಆಕಡೆ ಲೈನಿನಲ್ಲಿದ್ದಾರೆ.''

''ಹೇಳಿ ಶಿವಪ್ಪ.''

''ನೀವು ಇನ್ನೂ ರೆಡಿಯಾಗಿಲ್ವ ಸಾರ್? ಇವತ್ತು ಶಾಸಕರ ಕ್ರಿಕೆಟ್ ಪಂದ್ಯ ಅಲ್ವೆ? ಮರ್ತು ಬಿಟ್ಟಿದ್ರಾ?''

''ಯಾಕೋ ಭಯ ಆಗ್ತಿದೆ ಶಿವಪ್ಪ.''

''ಛೇ, ಛೇ ಬಿಡ್ತು ಅನ್ನಿ ಸಾರ್. ಐ.ಪಿ.ಎಲ್. ಆಟಗಾರರಿಗಿಂತಲೂ ಹೆಚ್ಚು ಹಣ ಕೊಟ್ಟು ಶಾಸಕರನ್ನು ಹರಾಜಿನಲ್ಲಿ ಬಿಡ್ ಮಾಡಿದ್ದೇವೆ.''

''ಆದ್ರೂ ನನ್ಗೊಂದು ಅನುಮಾನ ಕಾಡ್ತಿದೆ ಶಿವಪ್ಪ. ಇದರ ಜತೆಗೆ ನಮ್ಮ ಮಾನ ಮರ್ಯಾದೇನೂ ಹರಾಜಾಗಿ ಹೋಯ್ತು ಅಂತಾ?''

★★★

ಈಗ ನನ್ನನ್ನು ಕಾಡುತ್ತಿರುವ ಪ್ರಶ್ನೆ - ಹೀಗೂ ಉಂಟೇ.....?

# ಕ್ರಿಕೆಟ್ ವಕ್ರಬಂಧದ ಉತ್ತರಗಳು

| | | | | | | | |
|---|---|---|---|---|---|---|---|
| ಕ್ಲೈ | ವ್ | ಲಾ | ಯ್ಡ್ | | ಆಂ | | ಆ |
| | | ರಾ | | ಬೇ | ಡಿ | | ಲ್ |
| ವೇ | ಗಿ | | ನ್ಸ್ | ಬಿ | ರಾ | ಡ್ | ರೌಂ |
| | ಲ್ | ಯ | ಜೋ | | ಬ | | ಡ |
| ಸ್ | ಕ್ರಿ | | ನ್ | | ರ್ಟ್ಸ್ | | ರ್ |
| ವೆ | ಸ್ಟ್ | ಇಂ | ಡೀ | ಸ್ | | ಎಂ | |
| | | ಡಿ | | ವೀ | | ಟೀ | ಮ್ |
| ಕ್ರೋ | ನಿ | ಯ | | ಕಿ | ಮಾರ್ಜಿ | ನಿ | |

# ಸಿಂಡೀ ಮಾಡಿದ್ ಸೂಪು

**- ವಾಣೀ ಸುರೇಶ್**

**ನ**ಮ್ಮ ಬೆಂಗಳೂರಲ್ಲಿ ಉದಯ ಟೀವಿಯ ಮಧ್ಯಾನ್ಹದ ಸೀರಿಯಲ್ಗಳು ಶುರುವಾಗೋ ಹೊತ್ತು ಅನ್ನಬಹುದು. ಸಾಮಾನ್ಯವಾಗಿ ಇಲ್ಲಿದು ನಿಶ್ಯಬ್ದದ ಹೊತ್ತೇ. ಆದರವತ್ತು ಅನಿರೀಕ್ಷಿತವಾಗಿ ಡೋರ್ ಬೆಲ್ ರಿಂಗಾಯಿತು. ಇವರಿಬ್ಬರೂ ಕೆಲಸಕ್ಕೆ ಹೋಗಿರುವಾಗ, ಇಷ್ಹೊತ್ತಲ್ಲಿ ಹೇಳದೇಕೇಳದೇ ಬರಬೇಕಾದರೆ ಫೆಡೆಕ್ಸ್ ನೋನೇ ಇರ್ಬೇಕು, ಜಾಸ್ತಿ ಹರಟೆ ಹೊಡೆಯಕ್ಕೆ ಎನ್ಕರೇಜ್ ಮಾಡದೇ ಒಳಗೆ ಬಂದು ಬೇಗ ಸಂಜೆಯ ಅಡಿಗೆ ಪೂರೈಸಿಬಿಡ್ಬೇಕು ಅಂತ ಯೋಚಿಸ್ತಾ, ಬಾಗಿಲು ತೆಗೆಯಕ್ಕೆ ಹೋದೆ.

ಈ ಕಡೆ ಇಲ್ಲಿ ನೋಡಿದರೆ, ಬೀದಿ ಬಾಗಿಲಲ್ಲಿ ಪಕ್ಕದಮನೆ ಸಿಂಡೀ, ಕಣ್ಮೇಲೆ ಮತ್ತೆ ಮತ್ತೆ ಬೀಳ್ತಿದ್ದ ತನ್ನ ಕೆಂಚುಕೂದಲು ಸರಿ ಮಾಡ್ಕೊಳ್ತಾ ನಿಂತಿದ್ಲು!

''ವನೀ..., ಕಾಲ್ ಮಾಡದೇ ಇಷ್ಟು ಹೊತ್ತಲ್ಲಿ ಬಂದು ಡಿಸ್ಟರ್ಬ್ ಮಾಡ್ತಿರೋದಕ್ಕೆ ದಯವಿಟ್ಟು ಕ್ಷಮಿಸು. ನಿಕ್ ಬರೋವಷ್ಟರಲ್ಲಿ ಇವತ್ತು, ನಾನೇ ಸಪ್ಪರ್‌ನ ಕುಕ್ ಮಾಡಿ ಅವನಿಗೆ ಸರ್ಪ್ರೈಸ್ ಮಾಡೋಣಾಂತ. ಇದ್ದಕ್ಕಿದ್ದಹಾಗೇ ನೀನವತ್ತು ಕೊಟ್ಟಿದ್ದ ಸೂಪ್ ಮಾಡ್ಬೇಕೂಂತನ್ನಿಸ್ತು. ಈಗ ನಿಂಗೆ ಅದರ ರೆಸಿಪಿ ಕೊಡುಕ್ಕಾಗುತ್ತಾ ಪ್ಲೀಸ್?'' - ಒಂದು ನಿಮಿಷವೂ ವ್ಯರ್ಥ ಮಾಡದೇ ಸಿಂಡೀ ಕೇಳಿದ್ದು, ಒಳ್ಳೇ ಮಳೆ ಬಂದು ನಿಂತ ಹಾಗಾಯ್ತು.

ಈ ಸಿಂಡೀ ''ಜಬ್ ವೀ ಮೆಟ್'' ಹಿಂದಿ ಸಿನೆಮಾದ ನಾಯಕಿಯ ತದ್ವತ್ತು, ಮಹಾ ಹರಟೆಮಲ್ಲಿ. ಇಲ್ಲಿಯ ಎಕಾನಮಿಯಲ್ಲಿ ಇದ್ದಿದ್ದ ಕೆಲಸ ಕಳೆದುಕೊಂಡದ್ರಿಂದ, ಬೇರೆ ಒಳ್ಳೆಯ ಕೆಲಸಕ್ಕಾಗಿ ಕಾಯುತ್ತಿರುವ ನವವಿವಾಹಿತೆ. ಒಂದು ವೇಳೆ ನಮಗೂ ಪುರಸೊತ್ತಿದ್ದು, ಮಾಡಿದ್ರೆ ಆ ನಗು, ಆ ಲವಲವಿಕೆಯಲ್ಲಿ ಪಾಲುಗೊಳ್ಳುವುದೇ ಒಂದು ಚೆನ್ನ ಅಂತನ್ನಲೂಬಹುದು. 'ಅದೇನು ಮಹಾ ಅಷ್ಟೊಂದು ವಿಶೇಷ? ಆ ವಯಸ್ಸಿನ ಎಲ್ಲಾ ತರುಣಿಯರೂ ಹಾಗೇ' - ಅಂತೀರೇನೋ! ಇರಲಿ, ಈಗ ವರ್ತಮಾನಕ್ಕೆ ಬರೋಣ. ಹಿಂದೊಂದು ದಿನ ಅವಳಿಗೆ ನನ್ನ ಟೊಮೇಟೊ ಸೂಪು ಕೊಟ್ಟಿದ್ದುಂಟು. ಒಪ್ಪಿದೆ, ಅವತ್ತು ಅದಕ್ಕೆ ನಮ್ಮೂರಿನ ಟಚ್ ಕೊಡೋಣಾಂತ ನಾನು ಬಳಸಿದ್ದ ಸಾಂಬಾರ್ ಪುಡಿ, ನಮ್ಮ ಅಡಿಗೆಯನ್ನು ಇಷ್ಟಪಡುವ ಅವಳ ಟೇಸ್ಟ್ ಬಡ್ಸ್‌ಗೆ ಕಚಗುಳಿಯಿಟ್ಟಿರಬಹುದು! ಆದರೆ ಧಿಡೀರ್ ಅಂತ ತನ್ನ ರೆಸಿಪಿ ಪುಸ್ತಕ, ಪೆನ್ನನ್ನೂ ಹಿಡ್ಕೊಂಡು ಇಷ್ಹೊತ್ತಲ್ಲಿ ಬರೋದೆ?

ಸರಿ, ಇನ್ನೇನು ಮಾಡೋದು? ಆದರೆ ಇಷ್ಟು ಅನುನಯದಿಂದ ಕೇಳ್ತಿರಬೇಕಾದ್ರೆ ನಾನು ಒರಟೊರಟಾಗಿ ನೆವ ಹೇಳಿದರೇನು ತಾನೇ ಏನು ಚೆನ್ನ? ಸಾಲದ್ದಕ್ಕೆ, ಈ ಕಾಲದಲ್ಲಿ, ಅದೂ ಫೆಮಿನಿಸ್ಟ್‌ಗಳೇ ತುಂಬಿತುಳುಕಾಡುವ ಇಲ್ಲಿ, ಒಂದು ದಿನ ಗಂಡನಿಗೆ ಅಷ್ಟು ಪ್ರೀತಿಯಿಂದ ಅಡಿಗೆ ಮಾಡಿಹಾಕಬೇಕೂಂತಂದರೆ ವಿಶೇಷವೇ ಅಲ್ಲವೇ - ಅಂತಾನೂ ಅನ್ನಿಸಿತು.

ಮುಂದಿನ ಅರ್ಧ ಘಂಟೆಯಲ್ಲಿ, ನಾನು ಡಿಕ್ಟೇಟ್ ಮಾಡಿದ್ದೆಲ್ಲಾ ಅದೇನು ಮುತುವರ್ಜಿವಹಿಸಿ ಬರೆದುಕೊಂಡಳೂಂತ! ಹಾಗೇ, ನಾನು ಬೆಂಗಳೂರಿಂದ ತಂದಿದ್ದ ಎಂ.ಟಿ.ಆರ್. ಸಾಂಬಾರ್ ಪುಡಿಯ ಒಂದು ಪ್ಯಾಕೆಟ್ಟನ್ನೂ ಕೊಟ್ಟುಕಳಿಸಿದೆ, ಪಾಪ ಒಂದೆರಡು ಸಲಕ್ಕಾದರೂ ಆಗಲಿ ಅಂತ.

ಎರಡು ಮೂರು ದಿನವಾಗಿರಬಹುದು. ಅವತ್ತು ಸುಮಾರು ಹನ್ನೆರಡೂವರೆ ಹೊತ್ತಲ್ಲಿ ಸಿಂಡಿಯ ಫೋನ್, 'ನಿನಗೆ ತೊಂದರೆಯಾಗದಿದ್ದರೆ ಈಗ ಒಂದರ್ಧ ಘಂಟೆ ಬರಬಹುದೇ' ಅಂತ.

ಯಥಾಪ್ರಕಾರ, – ಅಂದು ತಾನು ಮಾಡಿದ್ದ ಸೂಪು ಎಷ್ಟು ಚೆನ್ನಾಗಿ ಬಂದಿತ್ತು. ನಿಕ್ ಎಷ್ಟು ಹೊಗಳಿದ ತನ್ನ ಪಾಕಪ್ರಾವೀಣ್ಯತೆಯನ್ನ – ಅಂತೆಲ್ಲಾ ಬಹಳ ಸಂಭ್ರಮವಾಗಿ, ಅವಳ ಹೊಸ ರುಚಿಯ ಪ್ರಯೋಗದ ಬಗ್ಗೆ ವಿವರಣೆ – ಅವಳು ಬಂದ ತಕ್ಷಣ.

ವಿದೇಶದಲ್ಲೂ ಒಬ್ಬಳು ಶಿಷ್ಯೆ ಇಷ್ಟು ಅನಾಯಾಸವಾಗಿ ಸಿಕ್ಕಿದ ಖುಷಿಯಲ್ಲಿ ಬೀಗುತ್ತಾ. 'ವೆರಿಗುಡ್' – ಅಂತಂದೆ.

ಅದೇ ಸಂತೋಷದಲ್ಲಿ, ಬೆಳಗ್ಗೆ ಮಾಡಿದ್ದ ನುಚ್ಚಿನುಂಡೆ – ಮಜ್ಜಿಗೆ ಹುಳಿ ರುಚಿ ನೋಡಲೀಂತ ಕೊಟ್ಟೆ. ''ಹೌ ಡಿಲಿಶಿಯಸ್ಲೀ spicy ಆರ್ ಯುವರ್ ಪ್ರೋಟೀನ್ ಡಂಪ್ ಲಿಂಗ್ಸ್!'' ಅಂತ ಲೊಟ್ಟೆಹೊಡ್ಕೊಂಡು ತಿಂದು ಮುಗಿಸಿದಳು. ಇಲ್ಲಿಯ ಅನೇಕರು ಅದೆಷ್ಟು ಇಷ್ಟಪಡ್ತಾರೆ ನಮ್ಮ ಅಡಿಗೆ ತಿಂಡಿಗಳನ್ನ ಅಂತ!

'ಯೋಗರ್ಟ್ ಜೊತೆ ಸವರ್ ಕ್ರೀಮ್ ಹಾಕಿದರೆ ಇಷ್ಟು ಚೆನ್ನಾಗಿರುವ ಸಾಸ್ ಆಗುತ್ತೆ ಅನ್ನುವ ಕನಸು ಸಹಾ ಬೀಳಲ್ಲ ನಮಗೆ' – ಅಂತ ಹೇಳ್ತಾ, ಮಜ್ಜಿಗೆ ಹುಳಿಗಾಗಿ ನನ್ನನ್ನು ಅಭಿನಂದಿಸಿ, ಮುಂದಿನ ಸಲ ಅದರ ರೆಸಿಪೀನೂ ಕೊಡಬೇಕು ಅಂತ ಬೇರೆ ರಿಕ್ವೆಸ್ಟಿಸಿದಳು.

ಮಗನಿಗೆ ಇವತ್ತು ಹೇಳಲೇಬೇಕೂಂತ ನಾನು ನಿರ್ಧರಿಸಿದೆ, – ''ನಿನ್ನ ತಿಂಡಿಪೋತಿ ಫ್ರೆಂಡು ಇವತ್ತೇನಂದ್ಳಮ್ಮಾ? ನಿನ್ನ ಕಂಪೆನಿಗೋಸ್ಕರ ಅವಳು ಬರ್ತಾಳೇನ್ತ ಎಲ್ಲಾದ್ರೂ ಅಂದ್ಕೊಂಡ್ಬಿಟ್ಟೇಡಾ. ಇಲ್ಲಿಯ ಶೋಕೀ ಹುಡುಗೀರಿಗೆ ಒಲೆ ಮುಂದೆ ಹೋಗಕ್ಕೆ ಬೇಜಾರು. ಮಾತೆತ್ತಿದರೆ ನಮ್ಮ ಕಲ್ಚರ್ರು, ಅದೂ ಇದೂಂತ ಹೇಳಿಕೊಂಡು ನೀನೂ ಅವಳಿಗೆ ಸರಿಯಾಗಿ ಸಿಕ್ಕಿದ್ದೀಯಾ ಅವಳ ಫೇವರಿಟ್ ಇಂಡಿಯನ್ ಫುಡ್ ಸಪ್ಲೈ ಮಾಡಕ್ಕೆ'' – ಅಂತ ಯಾವಾಗಲೂ ಸುಮ್ಮನೆ ರೇಗಸ್ತಿರ್ತಾನೆ.

ರೆಸಿಪಿ ಅಂದ ಕೂಡಲೇ ಮತ್ತೆ ಅವಳು ಅವತ್ತು ಮಾಡಿದ ಸೂಪಿನ ಬಗ್ಗೆ ಮಾತು ಹೊರಳಿತು. ಎಲ್ಲಾ ಸರಿಯಾಗೇ ಇತ್ತು. ಆದರೆ – ಅದರಲ್ಲಿ crackersನ್ನು ಅದ್ದಿಕೊಂಡು ಅದನ್ನ dip ತರಹಾ 'ತಿಂದ್ವಿ' ಅಂತ ಅವಳು ಹೇಳೋವರ್ಗೂ! ಹಾಗಂದಿದ್ದು ಕೇಳಿ ಮಾತ್ರ ನಂಗೆ ಸ್ವಲ್ಪ ಕಸಿವಿಸಿಯೇ ಆಯ್ತು. Dip ಅಂದ್ರೆ ಹೆಚ್ಚಿಗೆ ಖಾರವಿಲ್ಲದ, ಪೇಸ್ಟಿನಂತೆ ನುಣ್ಣಗಿರುವ ಚಟ್ನಿ ತರಹ ಅಂತನ್ನಬಹುದು. ಸಾಮಾನ್ಯವಾಗಿ ಉಪ್ಪುಖಾರವಿಲ್ಲದೆ ತಬ್ಬಲಿತಬ್ಬಲಿಯಾಗಿ ಒಳ್ಳೇ ರಟ್ಟಿನ ಚೂರುಗಳಂತೆ ಇರುವ ಒಂದು ರೀತಿಯ ಸಪ್ಪೆ

ಬಿಸ್ಕತ್ತುಗಳನ್ನು (ಅವನ್ನಿಲ್ಲಿ crackers ಅಂತ ಕರೀತಾರೆ) ಡಿಪ್ಪಲ್ಲಿ ಅಥವಾ ಅದೇ ರೀತಿಯಿರುವ ಮಧ್ಯ ಪ್ರಾಚ್ಯದ 'ಹಮ್ಮಸ್'ನಲ್ಲಿ ಅದ್ದಿಕೊಂಡು ತಿನ್ನುವುದು ಪದ್ಧತಿ.

ಕುತೂಹಲ ತಡೆಯಲಾರದೆ, ''ಅದು ಸರಿ ಸಿಂಡೀ, ನೀನು ಮಾಡಬೇಕೂಂತಿದ್ದಿದ್ದು ಸೂಪಲ್ವಾ? ಮತ್ತೆ ಡಿಪ್ ಯಾಕೆ ಮಾಡಕ್ಕೆ ಹೋದೆ?'' – ಅಂತ ಕೇಳೇಬಿಟ್ಟೆ.

''ನಿನ್ನ ರೆಸಿಪಿಯಲ್ಲಿ ಇದ್ದ ಹಾಗೇ ಮಾಡಿದೆ ವನೀ. ಆದರೆ ಅದು ಡಿಪ್ ತರ ಆಯ್ತು, ಯಾಕೋ ಗೊತ್ತಿಲ್ಲ'' – ಅಂದಳು.

''ನಾ ಹೇಳಿದ್ದಷ್ಟು ಟೊಮೇಟೊ ಹಾಕಿದ್ದೆ ತಾನೇ?'' – ನನ್ನ ಕ್ರಾಸ್ ಕ್ವೆಸ್ಚನ್ನು.

''ಹೌದು. ಅದೂ, ಈರುಳ್ಳಿ ಮತ್ತೆ ಸಿಲಾಂತ್ರೋ (ಕೊತ್ತಂಬರಿಸೊಪ್ಪಿನ ಇಲ್ಲಿಯ ನಾಮಧೇಯ) ಎಲ್ಲಾನೂ ಹಾಕಿದ್ದೆ. ಎಲ್ಲಾ ನೀನು ಬರೆಸಿದ್ದಷ್ಟೇ ಪ್ರಮಾಣದಲ್ಲಿ!'' – ಅಂದಳು.

ಓಹೋ, ಹಾಗಾದರೆ ಎಲ್ಲೋ ಏನೋ ಎಡವಟ್ಟಾಗಿದೆ ಅನ್ನಿಸಿತು. ನೀರೆಲ್ಲೋ ಕಮ್ಮಿಯಾಗಿರಬೇಕು, ಬೇಕಾದ ಸೈಜಿನ ಸಾಸ್ ಪ್ಯಾನ್ ಇತ್ತೋ ಇಲ್ಲವೋ ಪಾಪ. ಹೊಸಾ ಸಂಸಾರ ಬೇರೆ. ಹೇಗಿದ್ದರೂ, ಸಲಿಗೆಯಿರುವುದರಿಂದ ಅದನ್ನೂ ವಿಚಾರಿಸೇಬಿಟ್ಟರಾಯ್ತೂಂತ ಕೇಳೇ ಬಿಟ್ಟೆ.

''ನೀರಾ? ನಿನ್ನ ರೆಸಿಪೀಲಿ ಇಲ್ಲವೇ ಇಲ್ಲವಲ್ಲಾ'' ಅಂತ ತಲೆ ಕೆರ್ಕೊಂಡಳು.

''ಅಲ್ಲಮ್ಮಾ, ನೀರಿಲ್ಲದೆ ಅದು ಹೇಗೆ ಸೂಪ್ ಮಾಡಕ್ಕೆ ಸಾಧ್ಯ? ಹೋಗಲಿ ಹೇಗೆ ಮಾಡಿದೆ ಎಲ್ಲಾ ವಿವರಿಸಿ ಹೇಳು ನೋಡೋಣಾ'' – ಅಂತಂದೆ.

''ಎರಡು batch ಈರುಳ್ಳಿ, ಟೊಮೇಟೊ ಚೂರುಗಳಿಗೆ ಪ್ರತೀ ಸಲವೂ ಒಂದೂಮುಕ್ಕಾಲು ಟೀ ಸ್ಪೂನ್ ನೀರು ಚಿಮುಕಿಸಿ ಮೈಕ್ರೋವೇವಲ್ಲಿ ಕುಕ್ ಮಾಡಿದೆ. ಅದು ತಣ್ಣಗಾದ್ಮೇಲೆ ಬ್ಲೆಂಡರ್‌ನಲ್ಲಿ ಹಾಕಿ ಪೇಸ್ಟ್ ಮಾಡಿದೆ. ಅದಕ್ಕೆ ನೀನು ಕೊಟ್ಟ ಟೇಸ್ಟ್ ಎನ್ಹಾನ್ಸರ್ (ಸಾಂಬಾರ್ ಪುಡಿ ಇರಬೇಕು) ಹಾಕಿ, ಮತ್ತೆ 55 ಸೆಕೆಂಡು ಮೈಕ್ರೋವೇವ್ ಮಾಡಿ, ಸರ್ವ್ ಮಾಡಿದೆ. ನೀನು ಮಾಡಿದ್ exact same ಕನ್ಸಿಸ್ಟೆನ್ಸಿ, ರುಚಿ ಬರದೇದ್ರೂ ಚೆನ್ನಾಗೇನೋ ಇತ್ತು. ನಿಕ್ ಮಾತ್ರ ಸ್ವಲ್ಪ sea ಸಾಲ್ಟ್ ಬೇಕೇಬೇಕು ಅಂತ ಹಠ ಮಾಡಿ ಹಾಕ್ಕೊಂಡ. ನಾನೇನೋ ಹಾಗೇ ತಿಂದೆ, ನೀನು ಕೊಟ್ಟಿದ್ದಕ್ಕಿಂತಾ ಸ್ವಲ್ಪ ಬೇರೆ ತರ ಇತ್ತಷ್ಟೇ'' – ಅಂದಳು.

ಅಂದ್ರೆ..., ಈ ಮಹರಾಯಿತಿ ನೀರಿರಲಿ, ಉಪ್ಪನ್ನೂ ಹಾಕಿಲ್ಲ! ಅಯ್ಯೋ ದೇವಾ!! ಅದ್ಯಾಕೆ ಹಾಗೇ ಮಾಡಿದೆಯೇ ನಮ್ಮಮ್ಮ ಅಂತ ಮತ್ತೆ ಕೇಳೇಬಿಟ್ಟೆ.

''ಇಲ್ಲ ವನೀ, ನಿನ್ನ ರೆಸಿಪೀನಾ ಚಾಚೂ ತಪ್ಪಿಲ್ಲದೆ ಫಾಲೋ ಮಾಡಿದೆ, ನೀನೇ ನೋಡು ಬೇಕಾದ್ರೆ. ನೀನು ಅದ್ರಲ್ಲಿ ನೀರು, ಸಾಲ್ಟು ಎರಡನ್ನೂ ಹಾಕುಕ್ಕೆ ಹೇಳೇ ಇಲ್ಲ'' – ಅಂತಂದಳು!

ಶ್ರೀರಾಮರಕ್ಷೆ!

ಹೋಗ್಻ಿ ಪರವಾಗಿಲ್ಲ ಬಿಡು, ಮುಂದಿನ ಸಲ ಮಾಡಿದಾಗ ಇಷ್ಟು ನೀರಿನಲ್ಲಿ ಬೇಯಿಸಿ, ಇಷ್ಟು ಉಪ್ಪು ಹಾಕು ಅಂತ ತಿದ್ದುಪಡಿ ಮಾಡಿದೆ ಅಂತಿಟ್ಟುಕೊಳ್ಳಿ.

ಅಲ್ಲಾ ಮಾತಿಗೆ ಹೇಳ್ತೀನಿ.. ಹಾಗಾದರೆ, 'ಟೊಮೇಟೊ – ಈರುಳ್ಳಿ ಚೂರುಗಳನ್ನು ಮೆತ್ತಗಾಗೋ ಹಾಗೆ ಬೇಯಿಸಿಕೊಂಡು, ...' ಅಂತಷ್ಟೇ ಹೇಳಿದ್ದು ನನ್ನ ತಪ್ಪೇ? ಹಾಗೆ ನೋಡಿದ್ರೆ, ಮಾಡಕ್ಕೆ ಹೊರಟಿರೋದು ಇವರೂರಿಂದೇ ಟೊಮೇಟೊ ಸೂಪು! ಟೊಮೇಟೊಗಳನ್ನು ಅವು ಮುಳುಗುವಷ್ಟು ನೀರಲ್ಲಿ ಬೇಯಿಸಬೇಕೂಂತಾನೂ ಬಾಯಿಬಿಟ್ಟು ಹೇಳಬೇಕು ಅಂದ್ರೆ...

ನಾನು ಮತ್ತಷ್ಟು ಕ್ಲಿಯರ್ ಆಗಿ ಮಾತಾಡೋದು ಕಲಿಯಬೇಕೇನೋ! ಆದರೆ, ಸಮಯಕ್ಕೆ ಇಷ್ಟು ಅಭಾವವಿರುವ ದೇಶದಲ್ಲಿ ನಾನು ಇನ್ನೂ ಹತ್ತಿ ಹಿಂಜಿದ ಹಾಗೆ ಮಾತಾಡಕ್ಕೆ ಕೂತರೆ ಕೇಳಿಸಿಕೊಳ್ಳುವವರಿರಬೇಕಲ್ಲ!

ಮೊದಲೇ ಹೆಚ್ಚು ಮಾತಾಡಿದರೆ,

ಇಲ್ಲಿರುವ ನಮ್ಮ ಮಕ್ಕಳೇ, ನಯವಾಗಿ ಬೇಗ ಮುಗಿಸು ನಿನ್ನ ಹರಿಕತೇನಾ ಅನ್ನಕ್ಕೆ ಬದಲಾಗಿ – ''ಸೋ, ದ ಬಾಟಮ್ ಲೈನ್ ಈಸ್...?'' ಅಂತ ಶಾಲಲ್ಲಿ ಸುತ್ತಿ ಮೆಲ್ಲಗೆ ಕೊಡ್ತಾರೆ! ಇನ್ನು...

✵

---

## ಓದುಗರ ಗಮನಕ್ಕೆ

* ಅಪರಂಜಿ ಚಂದಾ ವಿವರ ಬೇಕೆ?
* ಪತ್ರಿಕೆ ತಲುಪದ ವಿಚಾರ ನಮಗೆ ತಿಳಿಸಬೇಕಿದೆಯೆ?
* ನಮ್ಮ ಪತ್ರಿಕೆಗೆ ಲೇಖನ ಬರೆಯಲಿದ್ದೀರಾ?

ಇಂತಹ ವಿಷಯಗಳ ಬಗ್ಗೆ ಉಪಸಂಪಾದಕರೊಂದಿಗೆ ದೂರವಾಣಿ ಮಾಡಲು ಬಯಸುತ್ತೀರಾ? ಸಂತೋಷ. ಆದರೆ ಬೆಳಗ್ಗೆ 7.00 ರಿಂದ 8.30 ಸಮಯದಲ್ಲಿ ಮಾತ್ರ ಕರೆ ಮಾಡಲು ವಿನಂತಿ. ಉಳಿದ ಸಮಯ ಅವರ ಇತರ ಕೆಲಸಗಳಿಗೆ ಮೀಸಲಾಗಿರುತ್ತದೆ ಎಂಬುದು ನಿಮ್ಮ ನೆನಪಿನಲ್ಲಿರಲಿ.

**ಹಾಗೆಯೇ ಗಮನಿಸಿ:** ನೀವು ದೂರವಾಣಿ ಮಾಡಿದಾಗ ನಿಮ್ಮ ಕರೆಯನ್ನು ಯಾರು ಸ್ವೀಕರಿಸಿದರೂ, ಅವರೊಂದಿಗೆ ನೇರವಾಗಿ ಮಾತಿಗಿಳಿಯದೆ 'ಉಪಸಂಪಾದಕರು ಇದ್ದಾರೆಯೆ?' ಎಂದು ವಿಚಾರಿಸಿ, ಅವರೊಂದಿಗೆ ಮಾತ್ರ ಮಾತನಾಡುವುದು ಸೂಕ್ತ. ಅವರು ಸಿಗದಿದ್ದರೆ ಅವರು ಲಭ್ಯವಿರುವ ಸಮಯ ತಿಳಿದುಕೊಂಡು ನಂತರ ಕರೆ ಮಾಡಬಹುದು.

ಇದಕ್ಕಿಂತಲೂ ಒಂದು ಸರಳ ವಿಧಾನವಿದೆ. ನಿಮಗೆ ಬೇಕಾದ ಮಾಹಿತಿ ಕೋರಿ ಒಂದು ರಿಪ್ಲೈ ಕಾರ್ಡ್ ಬರೆಯಿರಿ. ಲಿಖಿತ ಉತ್ತರ ಸಿಗುತ್ತದೆ. ಅಂದಹಾಗೆ ನಿಮ್ಮ ವಿಳಾಸ, ಚಂದಾ ಸಂಖ್ಯೆ ತಿಳಿಸಲು ಮರೆಯದಿರಿ! ದಯವಿಟ್ಟು ಸಹಕರಿಸಿ.

– ಸಂಪಾದಕರು

# ಅದೇನು ಮಾಯಾವಿಯಾ, ಮ-ಯೂರಿಯಾ?

**- ನಾಗೇಶ ಹೆಗಡೆ**

**ಈ**ಗಿನ ಹಳ್ಳಿಯ ಹುಡುಗರು 'ಹಳ್ಳಿ ತಿಂಡಿ' ಹುಡುಕಿಕೊಂಡು ಬೆಂಗಳೂರಿಗೆ ಬರುತ್ತಾರೆ. ಕಟ್ಟಿಗೆ ಬೇಕೆಂದರೂ ಮರವೇರುವ ಬದಲು ಬಸ್ ಏರುತ್ತಾರೆ.

ನಮ್ಮ ಮನೆಯ ಎದುರಿನ ಪುಟ್ಟ ಕೊಳದಲ್ಲಿ ಸಾಕಷ್ಟು ಪಾಚಿ ಕಟ್ಟಿತ್ತು. 'ಕ್ಲೀನ್ ಮಾಡೋಣಾರೀ' ಎಂದು ನನ್ನ ಅರ್ಧಾಂಗಿ ಸಲಹೆ ಕೊಟ್ಟು ನನ್ನನ್ನು ಹೊರಡಿಸಿದಳು. ಬಕೆಟ್, ಚೊಂಬು ಮತ್ತು ಜರಡಿಯನ್ನೂ ತಂದಿಟ್ಟು ನಾಪತ್ತೆಯಾದಳು. ಅದು ಅವಳ ಟ್ರಿಕ್ಕು! ಅಂದರೆ ಮುಂದಿನ ರಾಡಿ ಕೆಲಸಗಳನ್ನೆಲ್ಲ ನಾನೊಬ್ಬನೇ ಮಾಡಬೇಕು. ಹೊರಟೆ. ಕೊಳದ ನೀರನ್ನು ಖಾಲಿ ಮಾಡುವ ಮುನ್ನ ಅದರಲ್ಲಿ ಜರಡಿ ಇಳಿಸಿ ಅಲ್ಲಿದ್ದ ಪುಟ್ಟ ಪುಟ್ಟ ಗಪ್ಪಿ ಮೀನುಗಳನ್ನೆಲ್ಲ ಮೇಲೆತ್ತಿದ್ದೇ ತಡ, ಅಲ್ಲೇ ಪಕ್ಕದಲ್ಲಿದ್ದ ಹೇಂಟೆಯೊಂದು ಜರಡಿಗೆ ಬಾಯಿ ಹಾಕಿತು. ಪುಳಕ್ಕೆಂದು ಕುಪ್ಪಳಿಸುತ್ತಿದ್ದ ಮೀನುಗಳನ್ನು ಹೆಕ್ಕಿ ಹೆಕ್ಕಿ ತಿನ್ನುತ್ತಲೇ ಇತರ ಕೋಳಿಗಳನ್ನೂ ಕರೆಯಿತು.

ಏನೋ ಸಂಶೋಧನೆ ಮಾಡಿದಂತೆ ಆರ್ಕಿಮಿಡೀಸ್ ಥರಾ ನಾನೂ 'ಯೂ-ರೇಖಾ' ಎಂದು ನನ್ನಾಕೆಯನ್ನು ಕೂಗಿ ಕರೆದೆ. ಕೋಳಿಗಳು ಗಬಗಬನೆ ಗಪ್ಪಿಯನ್ನು ತಿನ್ನುವುದನ್ನು ಇಬ್ಬರೂ ತನ್ಮಯರಾಗಿ ನೋಡಿದೆವು. ಇವಳಂತೂ ಮತ್ತೆ ಮತ್ತೆ ಕೊಳಕ್ಕೆ ಜರಡಿ ಹಾಕಿ ಪುಟ್ಟ ಮೀನುಗಳನ್ನು ಕೋಳಿಗಳಿಗೆ ಕೊಟ್ಟಿದ್ದೇ ಕೊಟ್ಟಿದ್ದು.

ಗೆದ್ದಲುಗಳ ಬದಲು ದಿನವೂ ಈ ಮೀನುಗಳನ್ನೇ ಕೋಳಿಗಳಿಗೆ ನಿತ್ಯ ಆಹಾರವಾಗಿ ಕೊಟ್ಟರೆ ಹೇಗೆ? ಸರಿ, ಮೀನು ಸಾಕಣೆ ಬಗ್ಗೆ ನಮ್ಮ ಸಂಶೋಧನೆ ಆರಂಭವಾಯಿತು. ಕೃಷಿ ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಇಂಟರ್‌ನೆಟ್ ಪುಟಗಳನ್ನೂ ನಾಲ್ಕಾರು ದಿನ ಜಾಲಾಡಿ 'ಒಂದಿಷ್ಟು ಯೂರಿಯಾ ತನ್ನಿ' ಎಂದು ಈಕೆ ಆಜ್ಞಾಪಿಸಿದ್ದಳು. ಕೊಳದ ನೀರಿಗೆ ದಿನಾ ಒಂದರ್ಧ ಚಮಚೆ ಯೂರಿಯಾ ಹಾಕಿದರೆ ಮೀನುಗಳ ಸಂಖ್ಯೆ ಹೆಚ್ಚುತ್ತದೆ ಎಂದಿದ್ದಳು.

ಒಂದು ದಿನ ವಾಕಿಂಗ್ ಹೋಗಿದ್ದವ ಅಲ್ಲೇ ಗುಡ್ಡದ ಬದಿಯ ಸೋಮಪ್ಪನ ಮನೆ ಬಳಿ ಹೋದೆ. ಒಂದು ಮುಷ್ಟಿ ಯೂರಿಯಾ ಕೊಡುತ್ತೇನೆಂದು ಆತ ಪ್ರಾಮಿಸ್ ಮಾಡಿದ್ದ. ಹಾಗೆ ನೋಡಿದರೆ ಈ ಯೂರಿಯಾ ಮತ್ತು ಯುರೇನಿಯಂ ಎರಡರಿಂದಲೂ ಸಾಕಷ್ಟು ದೂರ ಇದ್ದವನು ನಾನು. ಇಂಥ ಕೆಮಿಕಲ್‌ಗಳ ಸಹವಾಸ ಬೇಡವೆಂದೇ ತಾನೆ, ಸಾವಯವ ಕೃಷಿ

ಅಂತ ಒದ್ದಾಡ್ತಾ, ಅಲ್ಲಿ-ಇಲ್ಲಿ ರಸ್ತೆ ಪಕ್ಕದಲ್ಲಿ ಬಿದ್ದ ಸೆಗಣಿಯನ್ನೆಲ್ಲ ಹೆಕ್ಕಿ ತರುತ್ತಿದ್ದಾಗ ಏನೇನೋ ಫಜೀತಿಗಳಾಗಿದ್ದು? ಸೆಗಣಿಯ ಬದಲು ಕೋಳಿಹಿಕ್ಕೆಗಳ ಜೀವಾಮೃತ ಮಾಡೋಣವೆಂದು ಕೋಳಿ ಸಾಕಾಣಿಕೆಗೆ ತೊಡಗಿದ್ದು? ಕೋಳಿಗಳಿಗೆ ತಿನ್ನಲೆಂದು ಗೆದ್ದಲು ಸಾಕಲು ಹೋಗಿ ಇನ್ನೊಂದು ಬಗೆಯ ಫಜೀತಿ ತಲೆದೋರಿದ್ದು? ಅವೆಲ್ಲ ಹಳೇ ಕತೆ ಬಿಡಿ.

ಅಂಗಳದಲ್ಲಿ ಸೋಮಪ್ಪ ಕಾಣಲಿಲ್ಲ. ಎಲ್ಲಿಗೆ ಹೋಗಿದಾನೆ ಎಂದು ಕೇಳಿದರೆ,

'ಕಟ್ಗೆ ತರಾಕೆ ಹೋಗೌನೆ' ಎಂದು ಅವರೆಕಾಳು ಬಿಡಿಸುತ್ತ ಕೂತಿದ್ದ ಅವನಮ್ಮ ಹೇಳಿದಳು.

'ಕತ್ಲ್ ಆಗ್ಯೆತಲ್ಲಮ್ಮ! ಇಷ್ಟೊತ್ತಿಗೆ ಬರಬೇಕಿತ್ತಲ್ಲ?' ಕೇಳಿದೆ.



'ಐ ಬುಡಿ ಬುದ್ದಿ. ವೋಟ್ಲಿಗ್ ಹೋಗಿ, ಆಮ್ಯಾಕಿನ್ನ ಮೊಬೈಲಿಗೆ ಆಡ್ ಹಾಕಿಸ್ಕಂಡು, ಇನ್ನೇನು ಲಾಸ್ಟ್ ಬಸ್ನಾಗೆ ಬಂದ್‌ಬುಡ್ತಾನೆ... ಏನ್ ಇಸ್ಯ?' ಎಂದು ಆಂಜನಮ್ಮ ನಮ್ಮನ್ನೇ ಕೇಳಿದಳು.

ಅವಳ ಉತ್ತರದಿಂದ ನನ್ನಲ್ಲಿ ನೂರೆಂಟು ಪ್ರಶ್ನೆಗಳೆದ್ದವು. ಈ ಹುಡುಗ ಕಟ್ಟಿಗೆ ತರೋಕೆ ಕಾಡಿಗೆ ಹೋದವನು ಅಲ್ಲೆಲ್ಲಿ ಹೊಟೆಲ್‌ಗೆ ನುಗ್ತಾನೆ? ನಾವೇನೋ ನಸುಕಿನಲ್ಲಿ ಕಾಡಿನ ಪೊದೆಗಳ ಪಕ್ಕ ಕೂತು ಮಡಿವಾಳ ಹಕ್ಕಿಗಳ ಹಾಡನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಲು ಯತ್ನಿಸಿದ್ದು ಉಂಟು. ಈತ ಕತ್ತಲಲ್ಲಿ ಮೊಬೈಲ್‌ನಲ್ಲಿ ಅದೇನು ಹಾಡು ಹಾಕಿಸಿಕೊಳ್ಳುತ್ತಾನೆ? ಕಟ್ಟಿಗೆ ತರಲು ಹೋಗಿದ್ದ ಸತ್ಯವಾನ ಸಾವಿತ್ರಿ ಕುರಿತು ಸಿನೆಮಾ ಹಾಡುಗಳಿವೆಯಾದರೂ ಅವು ಕಾಡಿನಲ್ಲಿ ಹೇಗೆ ಸಿಗಲು ಸಾಧ್ಯ? ಅಲ್ಲಿಂದ 'ಲಾಸ್ಟ್ ಬಸ್ನಾಗೆ' ಬರಲು ಹೇಗೆ ಸಾಧ್ಯ?

ಇನ್ನಷ್ಟು ವಿಚಾರಿಸಿದ ನಂತರ ಗೊತ್ತಾದದ್ದೇನೆಂದರೆ, ಸೋಮಪ್ಪ ಕಟ್ಟಿಗೆ ತರಲೆಂದು ಹೋಗಿದ್ದು ಕಾಡಿಗಲ್ಲ, ನಾಡಿಗೆ! ಆತ ಬೆಂಗಳೂರಿನ ಯಾವುದೋ ಸಾಮಿಲ್‌ಗೆ ಹೋಗಿದ್ದನೆಂದು ಕಾಣುತ್ತದೆ. ಊರಿನ ದೇವಸ್ಥಾನದಲ್ಲಿ ಅಯ್ಯಪ್ಪ ಸ್ವಾಮಿಯ ಭಜನೆ ಆರಂಭವಾದ್ದಾಗಿನಿಂದ ಪಾಳಿಯ ಮೇಲೆ ದಿನವೂ ಒಬ್ಬೊಬ್ಬರು ಕಟ್ಟಿಗೆ ರಾಶಿಯ ಅಗ್ಗಿಷ್ಟಿಕೆ ವ್ಯವಸ್ಥೆ ಮಾಡಬೇಕಿತ್ತು. ರಸ್ತೆ ಬದಿಯ ಅನಾದಿ ಕಾಲದ ಹಿಪ್ಪೆ, ಹುಣಿಸೆ, ಆಲ, ಬೇಲದ ಮರಗಳನ್ನೆಲ್ಲ ದೊಡ್ಡ ಕುಳಗಳು ಗುತ್ತಿಗೆ ಪಡೆದು ಕಡಿದು ನಗರಕ್ಕೆ ಸಾಗಿಸಿದ್ದರಿಂದ ಈಗ ಹಳ್ಳಿಯ ಹೈಕಳು ತುಂಡು ಕಟ್ಟಿಗೆಗೂ ಸಿಟಿಗೇ ಹೋಗಬೇಕಾಗಿದೆ. ಈ ಪಡ್ಡೆ ಹುಡುಗರಿಗೂ ಅದೇ ಬೇಕಿತ್ತು ಅನ್ನಿ. ಇವರು ಹಬ್ಬದ ದಿನಗಳಲ್ಲಿ ಬಾಳೆ ಗಿಡ ತರಲು ಸಿಟಿಗೆ ಹೋಗುತ್ತಾರೆ. ತೋರಣ ಕಟ್ಟಲು ತೆಂಗಿನ ಗರಿ, ಮಾವಿನ ಗೆಲ್ಲು, ಮುತ್ತುಗದ ಎಲೆ ಬೇಕಿದ್ದರೂ ಕತ್ತಿ ಹಿಡಿದು ಮರ ಏರುವ ಬದಲು ಚೀಲ ಹಿಡಿದು ಬಸ್ ಏರುತ್ತಾರೆ.

ಅಂತೂ ಆ ದಿನ ನನಗೆ ಚಿಟಿಕೆ 'ಯೂರಿಯಾ' ಸಿಗಲಿಲ್ಲ, ಮುಂದಿನ ಮೂರು ದಿನಗಳಾದರೂ ಸಿಗಲಿಲ್ಲ. ಯೂರಿಯಾ ಎಂಬುದು ದೊಡ್ಡ ಮಾಯಾವಿಯೇ ಇರಬೇಕು. ಜಗತ್ತಿನ ಯಾರ್‍ಯಾರಿಗೋ ಸಿಗುತ್ತದೆ. ಹಾಲಿಗೆ ಕಲಬೆರಕೆ ಮಾಡುವವರಿಗೆ ಅದು ಸಿಗುತ್ತದೆ. ಮೇವಿನ ಜತೆ ಮಿಶ್ರ ಮಾಡುವವರಿಗೆ ಸಿಗುತ್ತದೆ. ಹಲ್ಲುಪುಡಿ ತಯಾರಕರಿಗೆ, ಹೇರ್ ಕಂಡಿಶನರ್, ಕ್ಲೆನ್ಸಿಂಗ್ ಮಿಲ್ಕ್ ಹಾಗೂ ಪಾತ್ರೆ ತಿಕ್ಕುವ ಪುಡಿಗಳನ್ನು ತಯಾರಿಸುವವರಿಗೆ ಸಿಗುತ್ತದೆ. ಅಗ್ನಿಶಾಮಕ ನೊರೆ ತಯಾರಕರು, ಅಂಟು-ರಾಳ-ಪ್ಲಾಸ್ಟಿಕ್ ತಟ್ಟೆಗಳ ತಯಾರಕರು ಅದನ್ನು ಬಳಸುತ್ತಾರೆ. ಸಿಗರೇಟ್‌ನ ರುಚಿವರ್ಧಕವಾಗಿಯೂ ಯೂರಿಯಾವನ್ನು ಬಳಸುತ್ತಾರೆ. ಕಾಗದ ಮತ್ತು ಬಟ್ಟೆಗೆ ಹೊಳಪು ಕೊಡಲಿಕ್ಕೂ ಅದನ್ನೇ ಬಳಸುತ್ತಾರೆ. ಕೃಷಿಕರೂ ರಸಗೊಬ್ಬರದ ಅಂಗಡಿಯ ಮುಂದೆ ಕ್ಯೂನಿಂತು ಹೋರಾಡಿದರೆ, ಒಮ್ಮೊಮ್ಮೆ ಗೋಲಿಬಾರ್ ಗುಂಡಿಗೆ ಎದೆಕೊಟ್ಟರೆ ಸಿಕ್ಕೇ ಸಿಗುತ್ತದೆ. ಮತ್ತೆ ನಮಗೆ ಮಾತ್ರ ಚಿಟಿಕೆ ಯೂರಿಯಾ ಯಾಕೆ ಸಿಗುತ್ತಿಲ್ಲ? ಅದೇನು ಮಾಯಾವಿಯಾ, ಮ-ಯೂರಿಯಾ?

ಮೈಯ್ಯುರಿಯಿತು. ಮೀನುಗಳಿಗೆ ಯೂರಿಯಾನೇ ಯಾಕೆ ಬೇಕು ಎಂದೆಲ್ಲ ತನಿಖೆ ಮಾಡಿದೆ. (ಲಾಜಿಕ್ ಪ್ರಕಾರ, ಕೊಳದ ನೀರಿಗೆ ಡೇರಿ ಹಾಲು ಹಾಕಿದರೂ ನಡೆದೀತು- ಏಕೆಂದರೆ ಡೇರಿ ಹಾಲಿಗೆ ಯೂರಿಯಾ ಬೆರೆಸಿರುತ್ತಾರೆ). ಜಿಕೆವಿಕೆಯ ತಜ್ಞರಿಗೆ ಈ ಮೇಲಿನ ಪ್ರಶ್ನೆ ಎತ್ತಿ ಈ ಮೇಲ್ ಮಾಡಿದೆ. 'ಮೀನುಗಳು ನೇರವಾಗಿ ರಸಗೊಬ್ಬರ ತಿನ್ನೋದಿಲ್ಲ; ಯೂರಿಯಾ ಹಾಕಿದರೆ ಪಾಚಿ ದಟ್ಟವಾಗಿ ಬೆಳೆಯುತ್ತದೆ; ಅದು ಮೀನುಗಳಿಗೆ ಆಹಾರವಾಗುತ್ತದೆ' ಎಂಬ ಉತ್ತರ ಅಲ್ಲಿಂದ ಬಂತು.

ಅಲ್ಲಿಗೆ ನಮ್ಮ ಕತೆಯೂ ಹೊರಟಲ್ಲಿಗೇ ಬಂತು! ಇಷ್ಟಕ್ಕೂ ಕೊಳದಲ್ಲಿ ಬೆಳೆದಿದ್ದ ಪಾಚಿಯನ್ನು ತೆಗೆಯಲೆಂದೇ ತಾನೆ ಈ ಎಲ್ಲ ಕತೆ ಆರಂಭವಾಗಿದ್ದು?

✲